Reg. No. M. 1550

KODAGU

27—3—1936

IF NOT

delivered

please return to

"KODAGU"

OFFICE,

MERCARA.

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚುಮೆಚ್ಚಿನ

ಮುದ್ರಣ ಕೆಲಸಕ್ಕೆ

"ಕೊಡಗು"

ಪ್ರೆಸ್ಸು,

ಮಡಿಕೇರಿ.

—•—

ಹೆಚ್ಚಿನ ವಿಷಯಕ್ಕೆ

ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೭—೩—೧೯೩೬ [ಸಂಚಿಕೆ ೪೦

Telephon;
3145

By Appointment
To H. E. The Governor of Madras.

Telegrams:
'PRECIOUS.'



Brooch

Ring.

Necklace.

V. SUBRAMANIA IYER.

Jeweller, & Diamond-Merchant,

52-18 2 & 3 Kuppumuthu Street Tiruvateswaranpet. POST BOX 423 TRIPLICANE P. O., MADRAS.

Catalogue & special designs with quotations (free) on enqu ry

BANKING FACILITIES OF EVERY DESCRIPTION.

Head office:—UDIPI

BRANCHES:—

1. Madras,
2. Coondapoor.
3. Car Street, Mangalore
4. Bunder, Mangalore.
5. Shimoga.
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.
Paid up Rs. 2,80,750.
Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—19 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶವಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ

52—42

ವಿವಿಧ ವಾರ್ತಾವಳಿ.

ಕಲ್ಕತ್ತದಲ್ಲಿ ರೋಗದ ಹಾವಳಿ.

ಕಲ್ಕತ್ತದಲ್ಲಿ ಹೋದ ವಾರ 1047 ಮಂದಿ ಮಡಿದರು. ಅದಕ್ಕಿಂತ ಹಿಂದಿನ ವಾರದಲ್ಲಿ 967 ಮಂದಿ ಸತ್ತಿದ್ದರು. 464 ಜನರಿಗೆ ಸಿಡುಬು ತಾಗಿ 330 ಜನರು ಸತ್ತರು. ವಾಂತಿಭೇದಿಯು 188 ಜನರಿಗೆ ತಗಲಿ 68 ಜನರು ಮಡಿದರು.

—೦೦೦—

ಪೊಲೀಸ್ ಅಧಿಕಾರಿಗೆ ಶಿಕ್ಷೆ.

ಕಲ್ಕತ್ತದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಡಿಲ್ ಮಹಮ್ಮದ್ ಷಾ ಎಂಬ ಅಧಿಕಾರಿಗೆ, ಕೈದಿಗಳ ಒಪ್ಪಿಗೆಯನ್ನು ಬಲಾತ್ಕಾರದಿಂದ ಹಿಂಸಿಸಿ ಪಡೆದ ಅಪವಾದನೆಯ ಮೇಲೆ ಕಲ್ಕತ್ತ ಹೈಕೋರ್ಟು ಜಡ್ಜರು ಮೂರು ವರ್ಷಗಳ ಕಠಿಣ ಸಜಾ ವಿಧಿಸಿದ್ದಾರೆ.

—೦೦೦—

ಪ್ರೇಮಕ್ಕೂ ಪಿಕೆಟಿಂಗೇ?

ಕೇಕಾನ್ವೇ ಎಂಬ 23 ವರ್ಷದ ಇಂಗ್ಲಿಷ್ ಯುವತಿಯು ಹಾಲಿವುಡ್ಡಿನಲ್ಲಿ ನಟನಾದ ಹೆನ್ರಿಮೂಲಿಸನ್ ಎಂಬುವವನ್ನು ಪ್ರೇಮಿಸುತ್ತಿದ್ದಾಳೆ ಅವನಿಗದು ಸರಿಬೀಳದು. ಆದರೆ ಯುವತಿಯೇ ಹಠ ಹಿಡಿದು ಅವನ ಮನೆಯ ಮುಂದೆ ನಿಂತು ಪಿಕೆಟಿಂಗ್ ಮಾಡಿದಳು. ಪೊಲೀಸರು ಬಂದು ಅವಳನ್ನು ಅರೆಸ್ಟು ಮಾಡಿ 60 ದಿನಗಳ ಸಜ ವಿಧಿಸಿದರು.

—೦೦೦—

ದಕ್ಷತೆಗೆ ಇನ್ನೊಂದು ದೃಷ್ಟಾಂತ.

ಕಾಂಗ್ರೆಸ್ ಅಧಿವೇಶನದ ನಾಲ್ಕು ದಿನಗಳೂ, ದಿನಕ್ಕೆ 10 ಸಾವಿರ ಜನರಿಗೆ ಉಚಿತ ಭೋಜನದ ವ್ಯವಸ್ಥೆಯನ್ನು ಮಾಡುವದಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀಮತಿ ಅಮೃತಕೋರರವರು ಕಾಂಗ್ರೆಸ್ಸಿನ ಸ್ವಾಗತ ಮಂಡಲಿಯ ಜನರಲ್ ಸೆಕ್ರೆಟರಿಯವರಿಗೆ ಬರೆದಿದ್ದಾರೆ. ಹಿಂದೀ ಹೆಂಗಸರ ದಕ್ಷತೆಗೆ ಇನ್ನೊಂದು ದೃಷ್ಟಾಂತವಿದು.

—೦೦೦—

ಡಾ ಮುತ್ತುರವರಿಗೆ ಚಕ್ರವರ್ತಿಗಳ ಸನ್ಮಾನ.

ಎದೆರೋಗಗಳ ಪಾಂಡಿತ್ಯ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಹೋಗಿರುವ ಇಟ್ಟಿಸಾಸ್ಸಾನಿಟೋರಿಯಮಿನ ಸೂಪರಿಂಟೆಂಡಟರಾದ ಡಾ ಮುತ್ತುರವರಿಗೆ ಬಕಿಂಗ್‌ಹೆಮ್ ಅರಮನೆಯಲ್ಲಿ ಚಕ್ರವರ್ತಿ ಎಂಟನೆ ಎಡ್ವರ್ಡರು ದರ್ಶನವನ್ನು ಕೊಟ್ಟು ಯಂ ಬಿ. ಡಿಗ್ರಿಯನ್ನು ಮುತ್ತುರವರಿಗೆ ಕೊಟ್ಟರು. ಹೊಸ ಚಕ್ರವರ್ತಿಯವರಿಂದ ಈ ಪದವಿ ಪಡೆದ ಹಿಂದೀಯರಲ್ಲಿ ಡಾ. ಮುತ್ತುರವರೇ ಮೊದಲನೆಯವರು.

—೦೦೦—

ಲಖನೌ ಕಾಂಗ್ರೆಸಿಗೆ ಹೋಗುವ ಪ್ರೇಕ್ಷಕರಿಗೆ ಟಿಕೇಟು ದರಗಳು.

ಸ್ವಾಗತ ಮಂಡಲಿಯ ಅಧ್ಯಕ್ಷರಾದ ಚಂದ್ರಭಾನುಗುಪ್ತರವರ ನೇತೃತ್ವದಲ್ಲಿ ಪ್ರೇಕ್ಷಕರು ಅಧಿವೇಶನದಲ್ಲಿ ಹಾಜರಿರಬೇಕಾದರೆ ಕೊಡಬೇಕಾದ ಟಿಕೇಟುಗಳ ಬೆಲೆಯು ನಿರ್ಣಯವಾಗಿದೆ, ಅಧಿವೇಶನದ ಪೂರ್ತಿ ಹಾಜರಿರಲು ಆಶಿಸುವ ಪ್ರೇಕ್ಷಕರು 10 ರೂ. ಬೆಲೆಯ ಡಿ. ತರಗತಿಯ ಟಿಕೇಟನ್ನು ಕೊಳ್ಳಬೇಕು. ಈ ತರಗತಿಯಲ್ಲಿ ಒಂದೇ ದಿನ ಒಂದರೆ 5 ರೂ. ಕೊಡಬೇಕಾಗುವದು. ಇ ತರಗತಿಯಲ್ಲಿ ಪೂರ್ತಿ ಅಧಿವೇಶನಕ್ಕೆ 3 ರೂ. ಅಥವಾ ಒಂದು ದಿನಕ್ಕೆ 2 ರೂ.

ಹೆಂಗಸರಿಗೆ ಇಡೀ ಅಧಿವೇಶನಕ್ಕೆ ರೂ. 2—8-0 ಛಾರ್ಜು ಮಾಡಲಾಗುವದು.

—೦೦೦—

'ಜನವಾಣಿ' ಪತ್ರಿಕೆಯ ಮೇಲೆ ಮಾನನಷ್ಟದ ಮೊಕದ್ದಮ್ಮೆ

ಬೆಂಗಳೂರಿನ 'ತಾಯಿನಾಡು' ಪತ್ರಿಕೆಯ ಸಂಪಾದಕರಾದ ಶ್ರೀಯುತ ರಾಮಯ್ಯನವರು ಜನವಾಣಿಯ ಸಂಪಾದಕರ ಮೇಲೆ ಮಾನನಷ್ಟಕ್ಕೆ ದಾವೆಹೂಡಿದ್ದಾರೆ.

ಶ್ರೀ ಕಮಲಾನಹರುರವರು ಮರಣ ಹೊಂದಿದ ದಿನ ಮಗಳು ಇಂದಿರಾದೇವಿಯ ಚಿತ್ರವನ್ನು ಹಾಕಿ ಅದರ ಕೆಳಗೆ ದಿವಂಗತ ಕಮಲಾದೇವಿಯರೆಂದು 'ತಾಯಿನಾಡಿ'ನಲ್ಲಿ ಪ್ರಕಟವಾದುದರ ಬಗ್ಗೆ 'ಜನವಾಣಿ'ಯಲ್ಲಿ ಕೆಲವು ಟೀಕೆಗಳಿದ್ದವು. ಇವು ತಾಯಿನಾಡಿನ ಸಂಪಾದಕರ ಮನಕ್ಕೆ ಲೋಪತರುವಂಥಾದ್ದಾಗಿವೆಯಂತೆ.

—೦೦೦—

ಅಮೇರಿಕದಲ್ಲಿ ನಿರುದ್ಯೋಗಿಗಳಿಗೆ ಸಹಾಯ.

ಅಮೇರಿಕ ಅಧ್ಯಕ್ಷರಾದ ಮಿ. ರೂಸ್‌ವೆಲ್ಟರು ನಿರುದ್ಯೋಗಿಗಳಿಗೆ ಸಹಾಯವೊದಗಿಸುವುದಕ್ಕಾಗಿ ಈ ವರ್ಷ 1500 ಮಿಲಿಯ ಡಾಲರುಗಳನ್ನು ಮಂಜೂರು ಮಾಡಬೇಕೆಂದು ಸೂಚಿಸಿದ್ದಾರೆ. ಖಾಸಗಿ ಕಂಪೆನಿಗಳ ಮೂಲಕವೂ ಕೂಡ ನಿರುದ್ಯೋಗಿಗಳಿಗೆ ಸಹಾಯ ಮಾಡಬೇಕಾಗಿಯೂ ಪ್ರಾರ್ಥಿಸಿರುವರಂತೆ.

—೦೦೦—

ಗ್ರೀಸಿನ ಪ್ರಧಾನ ಮಂತ್ರಿಗಳ ನಿಧನ.

ಗ್ರೀಸಿನಲ್ಲಿ ಬಹಳ ಕಾಲದ ವರೆಗೆ ಪ್ರಧಾನ ಮಂತ್ರಿಗಳಾಗಿದ್ದು ಪ್ರಜಾಪಕ್ಷದ (ರಿಪಬ್ಲಿಕನ್ ಪಕ್ಷ) ಮುಂದಾಳುಗಳಾಗಿದ್ದ ಮತ್ತು ಇತ್ತೀಚೆಗೆ ಸಂಭವಿಸಿದ ಗ್ರೀಕ್ ಸೇನಾನಾಯಕರ ದಂಗೆಯಲ್ಲಿ ಮುಖ್ಯಸ್ಥರೆಂದು ಗಣಿಸಲ್ಪಟ್ಟ ವೂಜಿ ಪ್ರಧಾನ ಮಂತ್ರಿ ವೆನಿಜಿಲಾಸರು ತಾ. 18 ರಲ್ಲಿ ಇನ್‌ಫ್ಲುಯೆಂಜಾದಿಂದ ಕಾಲವಾದರು

—೦೦೦—

ಜವಾಹರ್‌ಲಾಲರಿಗೆ ಚಕ್ರವರ್ತಿಗಳ ಆಮಂತ್ರಣ.

ಶ್ರೀ. ಜವಾಹರಿಲಾಲರು ಲಂಡನಿನಲ್ಲಿದ್ದಾಗ ಈಗಿನ ಚಕ್ರವರ್ತಿಗಳಾದ ಎಡ್ವರ್ಡ್ ಪ್ರಭುಗಳ ಪರವಾಗಿ ಅವರ ಸೆಕ್ರೆಟರಿಯವರು ಜವಾಹರಿಲಾಲರಿಗೆ ಚಕ್ರವರ್ತಿಗಳ ಭೇಟಿ ಮಾಡಬೇಕೆಂದು ಆಮಂತ್ರಣ ಕಳುಹಿಸಿದ್ದರೆಂದೂ, ಕಾಂಗ್ರೆಸು ಮಹಾ ಸಂಸ್ಥೆಯು ತೆನ್ನನ್ನು ಮುಂದಿನ ಅಧ್ಯಕ್ಷನನ್ನಾಗಿ ಆರಿಸಿರುವದರಿಂದ ಆ ಸಂಸ್ಥೆಯ ಅಪ್ಪಣೆ ಇಲ್ಲದೆ ತಾನು ಆಮಂತ್ರಣವನ್ನು ಸ್ವೀಕರಿಸಲಾಗುವುದಿಲ್ಲವೆಂದು ಪಂಡಿತರು ಜವಾಬನ್ನಿತ್ತಿರುವರೆಂದೂ 'ರಿಯೂಸತ್' ಪತ್ರಿಕೆಯ ಲಾಬನ್ ಬಾತ್ಮಿದಾರರು ಬರೆದಿರುವ ಒಂದು ಭಾತ್ಮಿಯು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

—೦೦೦—

ಯಾರು ಬೇಕಾದರೂ ಆಯುಧಗಳನ್ನ ಇಟ್ಟುಕೊಳ್ಳಬಹುದು.

ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಯಾವ ಆಯುಧಕ್ಕೂ ಲೈಸೆನ್ಸು ಬೇಕಾಗಿಲ್ಲ. ಯಾವನು ಬೇಕಾದರೂ ಒಂದು ಗುಂಡಿನ ಪಿಸ್ತೂಲಿನಿಂದ ಹಿಡಿದು ಮೆಷಿನ್ ಗನ್ನುಗಳ ವರೆಗೆ ಕೊಳ್ಳಬಹುದು.

ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷ ಸಾಮಾನ್ಯಗಳ ಸಮಿತಿಯವರು ವಿಚಾರಣೆಯನ್ನು ನಡೆಸುತ್ತಿದ್ದಾಗ ಈ ವಿಷಯ ಗೊತ್ತಾಯಿತು. ಜೇಕಬ್ ಪ್ಯಾಲೇ ಎಂಬವನು ಇಪ್ಪತ್ತೆ ತನ್ನ ಉದ್ಯೋಗವನ್ನಾಗಿಟ್ಟುಕೊಂಡಿದ್ದಾನೆ. ಸೈನ್ಯವು ವರ್ಷಂಪ್ರತಿ ಹಳೆಯದಾಗುತ್ತಿದ್ದು ಮೂಲೆಗಿಡುತ್ತಿರುವ ಮೆಷೀನ್ ಗನ್ನುಗಳನ್ನು ಯಾರಾದರೂ ಕೊಂಡುಕೊಂಡು ಅದನ್ನು ಸರಿಮಾಡಿ ಜೇಬಿಗೆ ಕಲಸಗಳಿಗೆ ಉಪಯೋಗಿಸಬಹುದಂತೆ ಅಂತಹ ಹಳೆಯ ಗನ್ನುಗಳನ್ನು 6 ಪೆನ್ನಿಗಳಿಗೊಂದರಂತೆ 3870 ಮೆಷೀನ್ ಗನ್ನುಗಳನ್ನು ಅವನು ಕೊಂಡು 1 ಪೌಂಡು 11 ಶಿಲ್ಲಿಂಗಿಗೊಂದಂತೆ ಮಾರಿದನಂತೆ.

—೦೦೦—

ಹರಿಜನರಿಗೆ ಶಿವಮಂತ್ರ ದೀಕ್ಷೆಪದೇಶ.

ಪಂ. ಮದನಮೋಹನ ಮೂಲವೀಯರು ನಾಸಿಕದಲ್ಲಿ ಅನೇಕ ಹರಿಜನರಿಗೆ ಶಿವಮಂತ್ರ ದೀಕ್ಷೆಯನ್ನು ಕೊಟ್ಟರು. ಪಂಡಿತರು ಭಾಷಣಗಳನ್ನು ಕೇಳುವುದಕ್ಕೆ ಅನೇಕ ಸಾವಿರ ಹರಿಜನರು ಬಂದಿದ್ದರು ಅವರಲ್ಲಿ ಡಾ. ಅಂಬೇಡ್ಕರರ ಅನುಯಾಯಿಗಳೂ ಇದ್ದರು.

'ನನ್ನಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿದ್ದೇನೆ. ಆದರೆ ನನಗೆ ತೃಪ್ತಿಯಾಗುವಷ್ಟು ಫಲವು ದೊರೆಯಲಿಲ್ಲ. ಆದರೂ ನಾನು ನಿರಾಶೆಯುಳ್ಳವನಾಗಲಿಲ್ಲ. ಇನ್ನೆಷ್ಟು ಆಗಾಗ್ಗೆ ಇಲ್ಲಿಗೆ ಒಂದು ಹರಿಜನರು ಕೇಳಿದ ಎಲ್ಲವನ್ನೂ ಎಂದರೆ ಶ್ರೀ ರಾಮದೇವಸ್ಥಾನಕ್ಕೆ ಪ್ರವೇಶ. ಧರ್ಮಕ್ಷೇತ್ರವದಲ್ಲಿ ಭಗವಹಿಸುವುದು, ರಾಮಕುಂಡದಲ್ಲಿ ಸ್ನಾನ—ಈ ಹಕ್ಕುಗಳನ್ನು ಅವರಿಗೆ ಕೊಡಿಸುವ ಯತ್ನ ಮಾಡುತ್ತೇನೆ. ಇದುವರೆಲ್ಲಿ ಸುಪೂರ್ಣ ಜಯ ಸಿಗುವ ವರೆಗೂ ಆ ಪ್ರಯತ್ನ ಬಿಡುವುದಿಲ್ಲ' ಎಂದು ತಮ್ಮ ಭಾಷಣದಲ್ಲಿ ಹೇಳಿದರು.

—೦೦೦—

ಹಿಂದೀ ನಾಗರೀಕತೆಯ ಪ್ರಾಮುಖ್ಯತೆ.

ಪೋಲೆಂಡಿನ ಲಾ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ. ಸ್ಟೀಫನ್ ಸ್ಟೇಸಿಯೂಸ್ಕಿ ಶಾಂತಿನಿಕೇತನವನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಪೋಲೆಂಡಿನ ಆರು ವಿಶ್ವವಿದ್ಯಾನಿಲಯಗಳಲ್ಲಿಯೂ ಸಂಸ್ಕೃತವು ಕಲಿಸಲ್ಪಡುವುದೆಂದೂ, ಹಿಂದೀ ನಾಗರೀಕತೆಯ ವಿಷಯ ಉಚ್ಚಶಿಕ್ಷಣಕ್ಕೆ ಮೂರು ವಿಶ್ವವಿದ್ಯಾಲಯಗಳು ಹೆಚ್ಚಿನ ಗಮನಕೊಡುವುದಾಗಿಯೂ ಪೌರ್ವಾತ್ಯ ವಿಷಯಗಳ ಬಗ್ಗೆ ಒಂದು ಪತ್ರಿಕೆಯು ಇಡುವುದಾಗಿಯೂ ತಿಳಿಸಿದರು.

—೦೦೦—

ಸುಭಾಷರು ಹಿಂದೂಸ್ಥಾನಕ್ಕೆ ಬಂದರೆ ಸೆರೆ ಹಿಡಿಯಲ್ಪಡುವರು.

ಸುಭಾಷ್ ಚಾಂದ್ರಬೋಸರು ಡೈಲಿ ಹೆರಾಲ್ಡ್ ಪತ್ರಿಕೆಗೆ ಪತ್ರ ಬರೆದು ವಿಯೆನ್ನಾದಲ್ಲಿರುವ ಬ್ರಿಟಿಷ್ ರಾಯಭಾರಿಯಿಂದ ತರುಗೆ ಬಂದ ಪತ್ರವನ್ನು ಅದರಲ್ಲಿ ಪ್ರಸಿದ್ಧ ಮಾಡಿದ್ದಾರೆ. 'ಸುಭಾಷರು ಮಾರ್ಚಿನಲ್ಲಿ ಹಿಂದೂಸ್ಥಾನಕ್ಕೆ ಹಿಂತಿರುಗುವರಾಗಿ ಪತ್ರಿಕೆಗಳಲ್ಲಿ ಪ್ರಕಟವಾದ್ದರಿಂದ ಅವರು ಹಿಂದೂಸ್ಥಾನದಲ್ಲಿ ಕಾಲಿಟ್ಟರೆ ಹಿಂದೂಸ್ಥಾನ ಸರ್ಕಾರದವರು ಅವರನ್ನು ದಸ್ತಗಿರಿ ಮಾಡುವರೆಂದು ಎಚ್ಚರಿಕೆ ಕೊಡಬೇಕೆಂದು ಪರರಾಷ್ಟ್ರ ಸೆಕ್ರೆಟರಿಯವರು ತರುಗೆ ತಿಳಿಸಿರುವದಾಗಿ ವಿಯೆನ್ನದಲ್ಲಿನ ಬ್ರಿಟಿಷ್ ರಾಯಭಾರಿಗಳು ಈ ಪತ್ರದಲ್ಲಿ ಬರೆದಿದ್ದಾರೆ

—೦೦೦—

ಅಮೇರಿಕಾದಲ್ಲಿ ಮಹಾ ಜಲಪ್ರಳಯ.

ಅನೇಕ ಶತಮಾನಗಳಿಂದ ನಡೆಯುದಷ್ಟು ಹಾವಳಿ ಪೂರ್ವ ಅಮೇರಿಕ ಸಂಸ್ಥಾನಗಳಲ್ಲಿ ಜಲ ಪ್ರಳಯದಿಂದ ಆಗಿದೆ. ಓಹಿಯೋ, ಮೊಟೊವಿವ್, ಅಲಘನಿ ನದಿಗಳು ಏಕ ಕಾಲದಲ್ಲಿ ಪ್ರವಾಹ ಬಂದು ಅನೇಕ ಊರುಗಳನ್ನು ಮುಳುಗಿಸಿಟ್ಟಿವೆ. ಕೋಟ್ಯಾಂತರ ದ್ರವ್ಯ ನಷ್ಟವೂ ಅನೇಕ ಪ್ರಾಣ ನಷ್ಟವೂ ಆಗಿರುವಂತೆ ವರ್ತಮಾನ ಬಂದಿದೆ.

ಓಹಿಯೋ ನದಿಯಲ್ಲಿ ಯಾವಾಗಲೂ ಇಷ್ಟು ಅಗಾಧವಾಗಿ ಪ್ರವಾಹ ಬಂದಿರಲಿಲ್ಲವಂತೆ. ಸಾವಿರಾರು ಚದರ ಮೈಲುಗಳ ಕ್ಷೇತ್ರವು ಮಹಾ ಸಮುದ್ರವಾಗಿ ಪೆನ್ಸಿಲ್ವೇನಿಯದಲ್ಲಿರುವ ಕ್ವೆಮೂಹನಿಂಗ್ ಆಣೆ ಕಟ್ಟೆಯು ಕಿತ್ತುಹೋಗುವಷ್ಟು ಭಯಂಕರ ಸ್ಥಿತಿಯಲ್ಲಿದೆ. ಇತರ ಸಣ್ಣ ಪುಟ್ಟ ನದಿಗಳೂ ಪ್ರವಾಹದಿಂದ ತುಂಬಿವೆ ಈ ನದಿಗಳ ಬಯಲಿನಲ್ಲಿ ಅನೇಕ ಊರುಗಳು ಕೊಚ್ಚಿಕೊಂಡು ಹೋಗಿವೆ. ಸಾವಿರಾರು ಮಂದಿ ನಿಲ್ಲಲು ನೆಲೆಯಿಲ್ಲದೆ ನರಳುತ್ತಿದ್ದಾರೆ.

ಅಲಘನಿ ನದಿಯ ಪ್ರವಾಹವು 27 ಅಡಿಗಳಷ್ಟು ಏರಿದೆ. ಊರು ಊರುಗಳ ಸಂಬಂಧವನ್ನೇ ಹಾಳು ಮಾಡಿದೆ. ಮೇರಿಲ್ಯಾಂಡಿನಲ್ಲಿ 5 ಅಡಿ ನೀರು ನಿಂತಿದೆಯಂತೆ. ಅಲ್ಲದೆ ಗಂಟೆಗೆ 3 ಅಡಿಗಳಂತೆ ಏರುತ್ತಿದೆ. ದೀಪ ಸೌಕರ್ಯಗಳೂ ವರ್ತಮಾನ ಸೌಕರ್ಯಗಳೂ ನಾಶವಾಗಿವೆ.

ಇಥಾಕಾ ಎಂಬ ಊರು ದ್ವೀಪವಾಗಿದೆಯೆಂದು ಆಶುವಾರ್ತೆಯ ಸುದ್ದಿ. ಟೆಲಿಫೋನ್, ತಂತಿ ವರ್ತಮಾನಗಳು ನಿರ್ಮೂಲವಾಗಿವೆ. ನ್ಯೂಹೆವ್‌ಫರ್ಡ್‌ನ ಆಣೆ ಕಟ್ಟೆಯು ಒಡೆದುಹೋಗಿ ಅನಾಹುತ ಅಪಾರನೀಯವಾಗಿದೆಯಂತೆ.

ನದಿಯ ದಡದಲ್ಲಿರುವ ಪಿಟ್ಸ್‌ಬರ್ಗಿನ ಉಕ್ಕು ತಯಾರಿಸುವ ಕಾರ್ಖಾನೆಯು ಏಪರಾತವಾಗಿ ನಷ್ಟಗೊಂಡಿದೆ. ಲಾರೆನ್ಸ್‌ವೆಲ್‌ನ ಪ್ರಸಿದ್ಧ ಎಣೆ ಕಾರ್ಖಾನೆಗಳೂ ನಾಶವಾಗಿವೆ.

ಇನ್ನೂ ಹಾವಳಿಯಾಗುತ್ತಿರುವುದು. ಜಾನ್‌ಸ್ಟಾನ್ ಸೇರಿ ಮುತ್ತ ಊರುಗಳು ನೀರಲ್ಲಿವೆ. ನೀರು ಆ ಊರುಗಳ ಮೇಲೆ ಸುಳಿಸುತ್ತುತ್ತ ಕಡೆಯ ಪಕ್ಷ ಗಂಟೆಗೆ 15 ಮೈಲುಗಳ ವೇಗದಲ್ಲಿ ಹಾಯುತ್ತಿವೆಯಂತೆ. ಈ ಸೆಳತಕ್ಕೆ ಸಿಕ್ಕಿ ಸರ್ವವೂ ನಾಶವಾಗುತ್ತಿವೆ.

ರೆಡ್‌ಕ್ರಾಸ್ ಸಂಘದ ಸದಸ್ಯ ಸಿಬ್ಬಂದಿಯೂ ಪ್ರವಾಹ ಪೀಡಿತರಿಗೆ ಪರಿಹಾರ ಕೊಡಲು ಪ್ರಯತ್ನ ಮಾಡುತ್ತಿದ್ದಾರೆ.

—೦೦೦—

ಶ್ರೀಮತಿ ಕಮಲಾ ದೇವಿಯವರ ಭಾಷಣ

ಕಲ್ಕತ್ತದಲ್ಲಿ ಜರುಗಿದ ಅಂತರಾಷ್ಟ್ರ ಸಭೆಯ ಸ್ತ್ರೀ ಸಮ್ಮೇಳನದಲ್ಲಿ ಮಾಡಿದ ಭಾಷಣದ ಸಾರಾಂಶ.

'ಅಧ್ಯಕ್ಷೆಯಾದ ಮಹಾರಾಣಿಯವರಾಗಿರುವರೆಂದು ನಾನಿಂದು ಅವರನ್ನು ಪ್ರಶಂಸಿಸುವುದಿಲ್ಲ. ಕಾರಣ ರಾಜಮನೆತನದ ವೈಭವದಲ್ಲಿ ನನ್ನ ಮನಸೋತಿರುವುದಿಲ್ಲ. ಆದರೆ ಇಂದು ಎಂದೂ ಅಳುಗದ ಯೌವನಾಗಲೂ ವಿಚ್ಛಿನ್ನವಾಗದ ಸಹೋದರಿ ಭಾವದಿಂದ ದೇಶದ ಯುವತ್ವ, ಭಾಗಗಳಿಂದಲೂ ವಿವಿಧ ಪಂಗಡದ ಹಾಗೂ ಬೇರೆ ಬೇರೆ ಭಾಷೆಯನ್ನಾಡುತ್ತಿರುವ ಭಗಿನಿಯರೆಲ್ಲರೂ ಇಲ್ಲಿ ನೆರೆದು ಈ ಇಕ್ಕಟ್ಟಾದ ಭೌತಿಕ ಸನ್ನಿವೇಶಗಳು ನಮ್ಮ ನಿಜ ಜೀವನದ ಅರಿವನ್ನುಂಟುಮಾಡಿ ಜನತಾಂಗವೆಂಬ ಕುಟುಂಬದಲ್ಲಿರುವ ನಮ್ಮ ಕರ್ತವ್ಯಗಳೆಡೆಗೆ ನಮ್ಮನ್ನು ಸರಿಯುವಂತೆ ಮಾಡಿದೆ ಎಂದು ನಾನು ಧನ್ಯವಾದಗಳನ್ನರ್ಪಿಸಬೇಕಾಗಿದೆ. ನಾವೆಲ್ಲರೂ ಈ ಸುಂದರವಾದ ಪ್ರದೇಶವನ್ನು ಪ್ರವೇಶಿಸುವ ವೇಳೆಯಲ್ಲಿ ಇಲ್ಲಿಯ ಹಿಂದಿನ ವೈಭವ ಸಂಪತ್ತುಗಳ ದರ್ಶನ ಲಾಭವನ್ನು ಪಡೆಯಬೇಕೆಂದು ಎಣಿಸಿಕೊಂಡಿದ್ದರಬಹುದು. ಆದರೇನು? ಕೂಹಿನೂರು ವಜ್ರಗಳು, ನವಿಲಿನಾಕೃತಿಯ ಸಿಂಹಾಸನಗಳು ಇವುಗಳೆಲ್ಲವೂ ಇಂದು ನಮ್ಮ ಕಣ್ಮರೆಯಾಗಿ ಹೋಗಿವೆ ಅದು ಇಂದು ಒಡೆತನದಿಂದಲೂ ಹಸಿವೆಯಿಂದಲೂ ಇದ್ದು ಸ್ವಾತಂತ್ರ್ಯಕ್ಕಾಗಿ ಬಾಯ್ದೆರೆದಿರುವ ದೇಶವಾಗಿದೆ. ಈ ಸಂತೋಷಕೂಟದಲ್ಲಿ ಇಂಥ ದುಃಖಪ್ರದವಾದ ಮಾತುಗಳನ್ನು ನಾನೇಕೆ ಎತ್ತುವೆನೆಂದು ನಿಮಗೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಬಹುದು. ಆದರೆ ನಮ್ಮಲ್ಲಿಯಂಥ ಧ್ಯೇಯಗಳೆಲ್ಲವೂ ಎಂದೆಂದಿಗೆ ಅತ್ಯವಿರುವ ವಿಷಯಗಳೆಂಬುದನ್ನು ನಾವು ನಮ್ಮ ಚಿತ್ತಪಥದಲ್ಲಿರಿಸಿಕೊಳ್ಳಬೇಕು. ಲೋಕವಿಂದು ಸಮಷ್ಟಿ ಮತ್ತು ತನ್ನ ಹಕ್ಕು ಬಾಧ್ಯತೆಯ ಕೂಗಿಗೆ ತಲ್ಲೀನವಾಗಿದೆ. ಅಬಲೆಯನಿಯದ ಕೂಗು ಯಾವಾತನ ಹೃದಯವನ್ನು ದುಃಖ ಸಾಗರದಲ್ಲಿ ಮುಳುಗಿಸುತ್ತಿಲ್ಲ? ರಾಷ್ಟ್ರೀಯತೆ ಎಂಬುದೊಂದು ದುಷ್ಟ ಕಸಿನಿಂತೆ ಎನ್ನುವುದರಲ್ಲಿ ಸಂದೇಹವಿಲ್ಲ. ಭೋಗ್ಯರಾಯವು ಸಾಗರಾಂತರಾಗಿರಲೀ, ಗಗನ ಚುಂಬಿತವಾದ ಪರ್ವತವಾಗಲೀ ಜನತಾಂಗವನ್ನು ತುಂಡರಿಸಲು ಸಾಧ್ಯವಿಲ್ಲ. ಲೋಕದ ಪ್ರಜೆಗಳೆಗಾಗಿ ನಾವು ಇತರರಿಗೆ ಮಾರ್ಗದರ್ಶಕರಾಗಬೇಕು. ಸುಂಕದ ನಿಮಿತ್ತ ಜಗಳ, ಆಯುಧಗಳ ತಯಾರಿ, ವ್ಯಾಪಾರ ಕ್ಷೇತ್ರಗಳಿಗಾಗಿ ಓಟ ಇವೆಲ್ಲವೂ ಇಲ್ಲದಂತೆ ಮಾಡಿ ಹೊಸ ಲೋಕವನ್ನಿಂದು ಸ್ಥಾಪಿಸೋಣ. ಕಾಮನ ಬಿಲ್ಲಿನಲ್ಲಿ ಅನೇಕ ಬಣ್ಣಗಳು ಸೇರಿರುವಂತೆ ಹಲವು ಜನತಾಂಗಗಳು ನಮ್ಮ ದೇಶದಲ್ಲಿ ಒಂದಾಗಿ ಸೇರಲಿ? ನಮ್ಮ ನಾಡು ಸೊಬಗನ್ನೀಯಲಿ. ಸಹೋದರಿಯರೇ, ಹಿಂದೂ ದೇಶದ ಇಂದಿನ ಸ್ಥಿತಿಯನ್ನು ಕೊಂಚ ಗಮನಿಸಿರಿ. ಒಡವೆಷ್ಟು? ಕೂಳಿಗೂ ಗತಿಯಿಲ್ಲದ ನರಳುವವರೆಷ್ಟು? ದಿನಕ್ಕೊಂದು ಭೋಜನವನ್ನೂ ಮಾಡಲು ಅನುಕೂಲವಿಲ್ಲದವರೂ ಅನೇಕರಿರುತ್ತಾರೆ. ನಮ್ಮ ಸಹೋದರ ಸಹೋದರಿಯರಿಂದು ಇನ್ನೊಂದೆಡೆಯಲ್ಲಿ ಉಪವಾಸ ವ್ರತವನ್ನು ಗೈಯುತ್ತಿರುವಾಗ ನಾವಾದರೂ ಹೇಗೆ ಸಂತೋಷಚಿತ್ತರಿಂಗಬಹುದು? ನಾವು ಸಂಕಲೆಗಳಿಂದ ಬಿಗಿಯಲ್ಪಟ್ಟಲ್ಲಿ ನಮಗೆ ಸ್ವಾತಂತ್ರ್ಯವೆಲ್ಲಿ?

ಆರೋಗ್ಯ ವಿಚಾರ.

ಸಕ್ಕರೆ.

ಕೃತಕವಾದ ವಿಧವಿಧ ಸಕ್ಕರೆಗಳಲ್ಲಿರುವ ಮುಖ್ಯ ದೋಷಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯವು. ಸ್ತ್ರೀಯರೂ, ಬಾಲಕರೂ ಈ ಸಕ್ಕರೆಗಳನ್ನು ಅಧಿಕವಾಗಿ ಸೇವಿಸುವುದರಿಂದ ಸಕ್ಕರೆಯಿಂದಾಗುವ ಕೆಡುಕು ಅವರಲ್ಲಿ ವಿಶೇಷವಾಗಿ ಕಾಡು ಬರುವುದು. ಮಾಗಿದ ಹಣ್ಣುಗಳು, ಖರ್ಜೂರ, ಅಂಜೂರ, ಜೇನುತುಪ್ಪ, ತಂಕಾರಿಗಳು, ದ್ವಿದಳ ಧಾನ್ಯಗಳು ಇವೇ ಮುಂತಾದುವುಗಳನ್ನು ಸೇವಿಸಿಯೇ ನಾವು ದೇಹಕ್ಕೆ ಬೇಕಾದಷ್ಟು ಸಕ್ಕರೆಯನ್ನು ಒದಗಿಸಿಕೊಳ್ಳಬೇಕು. ಶುದ್ಧ ಬಿಳೀ ಸಕ್ಕರೆಗಿಂತ ನಾಡು ಸಕ್ಕರೆಯು ಉತ್ತಮವಾದುದು. ಆದರೆ ಅದರಲ್ಲಿ ಕಶ್ಮಲವು ಹೆಚ್ಚಾಗಿರುವುದುಂಟು.

ಸಕ್ಕರೆಯನ್ನು ಶುದ್ಧಪಡಿಸುವಾಗ ಕಬ್ಬಿಣ ರಸ ಮುಂತಾದುವುಗಳಲ್ಲಿರಬಹುದಾದ ಖನಿಜ ಸಂಬಂಧವಾದ ಪದಾರ್ಥಗಳೂ, ಹುಳಿ, ಮಿಟವಿಕ್ ಮುಂತಾದ ಪದಾರ್ಥಗಳೂ, ಬೆಂಕಿಯ ಕಾವಿನಿಂದಲೂ, ಇತರ ಔಷಧ ಪದಾರ್ಥಗಳಿಂದಲೂ ಹೋಗಿ ನಿಸ್ಸತ್ವವಾದ ಸಸ್ಯ ಭಾಗಗಳು ಮಾತ್ರ ಉಳಿಯುವುವು. ಇಂತಹ ಸಕ್ಕರೆಯ ಭಾಗವು ರಕ್ತನಾಳಗಳಲ್ಲಿಯೂ, ಎಲುಬಿನಲ್ಲಿಯೂ ಇರುವ ಖನಿಜ ಪದಾರ್ಥಗಳಿಗೆ ವಿರೋಧವಾಗಿ ವರ್ತಿಸಿ ಅಜೀರ್ಣ, ರಕ್ತಭೇದಿ, ರಕ್ತಕ್ಷಯ, ಹಲ್ಲುಗಳು ಕೊಳೆಯುವುದು ಇವೇ ಮುಂತಾದ ವ್ಯಾದಿಗಳಿಗೆ ಕಾರಣವಾಗುವುದು.

ಹಿಟ್ಟು ಅಧಿಕವಾಗಿರುವ ಆಹಾರಗಳು ಎಂದರೆ ರೊಟ್ಟಿ, ರಾಗಿಮುದ್ದೆ, (ಅಂದರೆ ಬೆಳಗುಗಡ್ಡೆ) ಕಡುಬು ಮುಂತಾದವು ನಮ್ಮ ಜೊಲ್ಲು ರಸದ ಸಂಯೋಗದಿಂದ ಸಕ್ಕರೆಗಳಾಗಿ ರಕ್ತಗತವಾಗುವುವು. ಈ ಪದಾರ್ಥವನ್ನು ವಿಶೇಷವಾಗಿ ಸೇವಿಸುತ್ತಾ ಬರುವುದರಿಂದ ಸಕ್ಕರೆಯಲ್ಲಿಯೂ, ಪೆಪ್ಪರ್‌ಮೆಂಟು ಮುಂತಾದ ಪದಾರ್ಥಗಳಲ್ಲಿಯೂ, ಹಿಟ್ಟು ಕೂಡಿರುವ ಪದಾರ್ಥಗಳಲ್ಲಿಯೂ ಅಭಿಲಾಷೆಯೂ ಹೆಚ್ಚುವುದು.

ಈಜುವುದರಿಂದಾಗುವ ಪ್ರಯೋಜನಗಳು.

ಈಜುವವನು ತನ್ನ ದೇಹದ ಸಮಸ್ತ ಭಾಗಗಳನ್ನೂ ಜೊತೆಗೂಡಿ ನೀಡಿ ತನ್ನ ದೇಹಶಕ್ತಿ ಎಲ್ಲವನ್ನೂ ಉಪಯೋಗಿಸಲು ಅನುಕೂಲವಾಗುವುದು. ಆತನ ದೇಹವೆಲ್ಲವೂ ಆತನ ಅಧೀನದಲ್ಲಿಯೇ ಇರುವುದರಿಂದ ಮನಬಂದಂತೆ ಉಲ್ಲಾಸದಿಂದ ಈಜಾಡುತ್ತಿರಬಹುದು. ಇಲ್ಲದಿದ್ದರೆ ಒಬ್ಬ ಶಿಕ್ಷಕನನ್ನು ಗೊತ್ತುಮಾಡಿಕೊಂಡು ಆತನು ಹೇಳಿದ ರೀತಿಯಲ್ಲಿ ಈಜಬಹುದು.

ವ್ಯಾಯಾಮದಿಂದ ಶರೀರಕ್ಕೆ ಆಗುವ ಗುಣ ಭಾಗಗಳನ್ನು ನೋಡುವಲ್ಲಿ ಈಜುವಿಕೆಯೇ ಅತ್ಯುತ್ತಮವಾದ ಸಾಧನೆಯು. ಈಜುವುದರಿಂದ ರಕ್ತ ಸಂಚಾರವು ವೇಗವಾಗಿ ನಡೆಯುವುದು. ದೇಹದಲ್ಲಿಂದ ಮುಖ್ಯವಾದ ಮೂಸ ಖಂಡಗಳಿಗೂ ಪ್ರೋಧನೆಯಾಗುವುದು ಬಲವಾಗಿ ಈಜುವಾಗ ನಾವು ಹೊರಗೆ ಬಿಡುವ ಗಾಳಿಯು ಶರೀರದ ತಳಭಾಗದಿಂದ ಬರುವುದು. ಇದರಿಂದ ನಮ್ಮ ಶ್ವಾಸಕೋಶಗಳು ಚೆನ್ನಾಗಿ ಬೆಳೆದು ತಮ್ಮ ಕಾರ್ಯವನ್ನು ಸಮರ್ಥವಾಗಿ ದೇಹಕ್ಕೆ ಆಮ್ಲಜನಕವನ್ನು ಒದಗಿಸಲು ಸಹಕಾರಿಯಾಗುವುವು. ಈ ಅಂಗ ಸಾಧನಕ್ಕೆ ವಿಶೇಷವನ್ನು ಕೊಸ್ಪದೆ ಮಾಡುತ್ತಾ ಬರುವುದರಿಂದ ಮೂಸ ಖಂಡಗಳು ಚೆನ್ನಾಗಿ ಉಬ್ಬಿ ಒಲಿಮೈಯಾಗುವುವು. ದೇಹದೊಳಗಿನ ಕಶ್ಮಲಾದಿಗಳ ವಿಸರ್ಜನೆಗೂ ಈಜುವಿಕೆಯು ಸಹಕಾರಿಯಾಗುವುದು. ಈಜುವುದರಿಂದ ಹೊಟ್ಟೆಯಲ್ಲಿನ ಮೂಸ ಖಂಡಗಳೆಲ್ಲವೂ ಚೆನ್ನಾಗಿ ಬೆಳೆಯುವುವು. ಮತ್ತು ಮೂತ್ರ ಕೋಶ, ಕರುಳು, ಮುಂತಾದವುಗಳಲ್ಲಿರುವ ಸಾಮಾನ್ಯ ಬಾದೆಗಳೆಲ್ಲ ನಿವಾರಣೆಯಾಗುವುವು. ಮತ್ತು ಈ ಸಾಧನೆಯು ನಿದ್ರಾಲೋಪಗಳೆಲ್ಲವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯು ಬರುವಂತೆ ಮಾಡಿ ದೇಹದ ಸಮಸ್ತ ಭಾಗಗಳಿಗೂ ವಿಶ್ರಾಂತಿ ಸುಖವನ್ನು ಕೊಡುವುದು. ಈಜುವಾಗ ಎಲ್ಲಾ ಮೂಸ ಖಂಡಗಳನ್ನೂ ಉಪಯೋಗಿಸುವುದರಿಂದ ರಕ್ತ ಸಂಚಾರವು ವೇಗವಾಗಿ ನಡೆಯುವಂತಾಗಿ ದೇಹದಲ್ಲಿ ಎಲ್ಲೆಲ್ಲಿ ತಂಗಿರುವ ಕಶ್ಮಲಾದಿಗಳನ್ನು ಶುದ್ಧೀಕರಣಾಂಗಗಳ ಮೂಲಕವಾಗಿ ಹೊರಗೆ ತಳ್ಳಲು ಅನುಕೂಲವಾಗುವುದು.

'ರಾ. ಬ.'

ಕುದಿ.

(ಆರ್. ಎಸ್. ಭಾರದ್ವಾಜ, ಕೊಡಗು.)

ಎಂದೋ ಎಲ್ಲೋ ಕಂಡ ರೂಪಿದು |
ಅಂದಾದೇವಿಯು ನಡೆದ ಭೂಮಿಯು
ಇಂದಿಗೆ ಕನಸಿನ ರಾಜ್ಯವಾದುದೇ ?
ಮಿಂಚಿದ ದಿನಗಳು ಮುಂದೆ ತೋರವೆ ? ॥ ೧ ॥

ಭಾರತ ಮಾತೆಯ ಕೊಂಳ ಮಣಿಮಾಲೆ
ಇಂದೀ ವಿಧದಲಿ ಕಾಂತಿ ಗುಂದಿತೆ ?
ಚದುರಿದ ಉದುರಿದ ಮಣಿಯು ನಾಯ್ದವ
ನೆಲ್ಲಿಹ ನಾಂಗಿ ಹಾರವ ಕೊಡಿಪ ? ॥ ೨ ॥

ಆವುದೋ ರಾಜ್ಯವು ಅವರ ಬಾಳ್ವೆಯ
ಮೂಯೆಯು ಬೇರೂರಿಹುದು ಭಾವವ
ತಗ್ಗಿಸಿ, ಕನಸೋ ನನಸೋ ತಿಳಿಯದ
ಪರಿಯಲಿ ತಳಮಳಗೊಳಿಸಿ ಕಾಡ್ವುದು ॥ ೩ ॥

ಎಂದಿಗೆ ನಿಲುವುದು ತಾಯ ದುಃಖವು ?
ಎಂದಿಗೆ ಕಣ್ತುಂಬುದೂ ಸೋದರರ ನುನ ?
ಎನ್ನೆಂದಿಗೆ ಸಂತಸವು ಬಾಯುವುದೋ ?
ಹಿಮಗಿರಿ ಇಂದಿಳಿವ ಬಿಸಿಲ ಹೊಳಹು ? ॥ ೪ ॥

ಭಾರತ ಭಾಗ್ಯನ ತಂದ ಭಾಸ್ಕರ |
ನಸ್ಯವಾಸೆ, 'ಕಮಲವು' ಬಾಡ್ವುದ.|
ಮುದುಡುವುದೆನಿತೋ ಕುಸುಮ ಸೌಂಭ
ವೊಂದನೆ ಸಮಯುತ ತಣ್ಪೆ ತಾಯಿಗೆ ? ॥ ೫ ॥

ಉದುರಿತು ಕಂಬನಿ ಮೂಕ ಬಳಲಲು
ಸುತ್ತಿತು ಕತ್ತಲೆ ! ಬಟ್ಟೆ ಕಾಣದು !
ಎಡವಿಯೋ ತಡವಿಯೋ ಗುರಿಯ ಸೇರದೆ
ಎದೆಗುಂದುವರೇ ವೀರ ಪುತ್ರರು ? ॥ ೬ ॥

ಮುಂದಿನ ಪಥದಲಿ ಬೆಳಕ ಬೀರುವ
ತಾರಾ ಬಳಗವ ಸೇರಿ, ಪಥಿಕರ
ಧೈರ್ಯವನೆಬ್ಬಿಸಿ, ಉದಿಸಲು ಸೂರ್ಯ
ಅರಳುತ 'ಕಮಲಿನಿ' ಸೊಬಗ ನುಣ್ಗಸಳೆ ? ॥ ೭ ॥

ಸೂಚನೆ:—ಶ್ರೀಮತಿ ಕಮಲ ನೇಹರುರವರನ್ನು ಕುರಿತ ಚರಮಗೀತೆಯೇ ಇದಾದರೂ ಇದರಲ್ಲಿ ಉರುಳಿದ ಹಿಂದಿನ ಭಾರತ ಜ್ಯೋತಿಗಳ ಕುದಿಯೂ ಸಮನ್ವಯವಾಗಿರುವುದರಿಂದ 'ಕ-ದಿ' ಎಂಬ ಸಾರ್ವತ್ರಿಕಾರ್ಥವುಳ್ಳ ಶೀರ್ಷಕವನ್ನು ಈ ಕಿರ್ನುಗಬ್ಬಕ್ಕೆ ಕೊಡಬೇಕಾಯಿತು.

ವಿಜ್ಞಾಪನೆ.

ಮಹಾಶಯರುಗಳಲ್ಲಿ ವಿನಂತಿ:—

ಕೊಡಗಿಗೆ ಮುಖ್ಯವಾದ ದೇವಸ್ಥಾನಗಳು—ಶ್ರೀ ಕಾವೇರಿಯಮ್ಮತೆ ಮತ್ತು ಶ್ರೀ ಶಾಂತಮಲ್ಲೇಶ್ವರ ಮಲ್ಲಿಕಾರ್ಜುನ ದೇವರುಗಳದಾಗಿರುತ್ತವೆ. ಶ್ರೀ ಶಾಂತಮಲ್ಲೇಶ್ವರ ಮಲ್ಲಿಕಾರ್ಜುನ ದೇವಾಲಯವು ಉತ್ತರ ಕೊಡಗು ತಾಲೋಕು ಸೋಮವಾರಪೇಟೆನಾಡು ಕುಮುರಳ್ಳಿ ಗ್ರಾಮದ ಹೆಗ್ಗಡೆ ಮನೆಯಲ್ಲಿರುವ ಪುಷ್ಪಗಿರಿಯ ಬುಡದಲ್ಲಿರುವ ದೇವಾಲಯವಾಗಿರುತ್ತದೆ ಈ ದೇವಾಲಯವನ್ನು ನೋಡಿದವರು ಕವ್ಮಿಯೊಂದೇ ಹೇಳಬೇಕಾಗಿರುತ್ತದೆ, ಸ್ವಾಮಿಯವರ ಪವಿತ್ರವನ್ನು ಕೇಳದವರು ಯಾರೂ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಈ ದೇವಾಲಯವು ಅರಣ್ಯ ಪ್ರದೇಶದಲ್ಲಿ ಇದ್ದಾಗ್ಯೂ ಅನೇಕ ಭಕ್ತಾದಿಗಳು ದೇವರ ದರ್ಶನಕ್ಕೆ ಬಹು ದೂರದಿಂದ ಬರುತ್ತಿರುತ್ತಾರೆ ಇಂಥಾ ದೇವಾಲಯವು ಜೀರ್ಣಾವಸ್ಥೆಯಲ್ಲಿ ಇರುವುದನ್ನು ನೋಡಿದರೆ ಎಂತವರ ಮನಸ್ಸೂ ಕರಗಿ ನೀರಾಗದೆ ಇರಲಾರದು.

ಈ ದೇವಾಲಯದ ಕಟ್ಟಿಣವು ಜೀರ್ಣಾವಸ್ಥೆಯಲ್ಲಿದ್ದದನ್ನು ಈಗ ಸುಮಾರು 15 ವರ್ಷಗಳ ಹಿಂದೆ ಅಚ್ಚುಮತ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ಧನಸಹಾಯದಿಂದಲೂ, ಆ ಕಾಲದಲ್ಲಿ ನಾಡು ಪಾಗಾರವರಾಗಿದ್ದ ಮ. ರಾ. ಕೇತಿಯಂಡ ಕಾಳಪ್ಪನವರು ಮತ್ತು ಆ ಕಾಲದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರುಗಳಾಗಿದ್ದ ಮ. ರಾ. ಕೋದಂಡ ಐಯ್ಯಂಣನವರ ಸಹಾಯದಿಂದಲೂ ಮತ್ತು ನಾಡಿನ ಕೆಲವು ಮಹನೀಯರುಗಳ ಪ್ರೇರಣೆಯಿಂದಲೂ ಊರ್ಜಿತಕ್ಕೆ ತಂದು ಕಟ್ಟಿಣವನ್ನು ಮಾಡಿಸಿದರು. ಇವುಗಳಿಗೆ ಎಷ್ಟು ವಂದಿಸಿದರೂ ಅತ್ಯಲ್ಪವೆಂದೇ ಹೇಳಬೇಕಾಗಿರುತ್ತದೆ.

ದೇವಾಲಯವು ಶೀತಪ್ರದೇಶದಲ್ಲಿ ಇರುವುದರಿಂದಲೂ, ದೇವಾಲಯದ ಎಜ್ಜರಿಕೆಗಳು ಅಶ್ಶಲ್ಪವಾದುದರಿಂದಲೂ ಕಟ್ಟಿಣವು ಬಹಳ ಜೀರ್ಣಾವಸ್ಥೆಯಲ್ಲಿ ಇರುತ್ತದೆ. ಈ ಕಟ್ಟಿಣವನ್ನು ಸರಿಪಡಿಸಲು ದೇವರ ಭಂಡಾರದಲ್ಲಿ ಸಾಕಷ್ಟು ಹಣವಿಲ್ಲದೆ ಕಟ್ಟಿಣದ ಕೆಲಸವನ್ನು ಪೂರೈಸಲು ಅಸದಳವಾದುದರಿಂದ ಚಂದಾ ವಸೂಲು ಮಾಡಿಯಾದರೂ ದೇವರ ಕಾರ್ಯವನ್ನು ನೆರವೇರಿಸಬೇಕೆಂದು ನಿಶ್ಚೈಸಿರುತ್ತಾರೆ. ಮತ್ತು ವಸೂಲಾದ ಚಂದಾ ಹಣವನ್ನು ದುರುಪಯೋಗಪಡಿಸದಂತೆಯೂ ಕಟ್ಟಿಣದ ಕೆಲಸವನ್ನು ಸರಿಯಾಗಿ ನಡೆಸುವುದಕ್ಕಾಗಿಯೂ ಈ ಕೆಳಗಿನವರುಗಳ ಒಂದು ಕಮಿಟಿಯನ್ನು ಆರಿಸಿರುವುದಾಗಿರುತ್ತದೆ.

ದೇವರ ಭಕ್ತಾದಿಗಳು ಮತ್ತು ಎಲ್ಲಾ ಮಹನೀಯರುಗಳು ಈ ದೇವರ ಕಟ್ಟಿಣದ ಕೆಲಸವನ್ನು ಪೂರೈಸಲು ಧನ ಸಹಾಯ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಈ ಮೂಲಕ ಅರಿಕೆ ಮಾಡಿಕೊಳ್ಳುವವರಾಗಿರುತ್ತಾರೆ.

ಚಂದಾ ಕೊಡುವ ಮಹನೀಯರುಗಳು ಪ್ರಿಂಟಾಗಿರುವ ರಶೀತಿಯನ್ನು ಹೊಂದಿಕೊಳ್ಳದೆ ಹಣ ಕೊಡಬಾರದಾಗಿಯೂ, ಇಲ್ಲವೆ ಈ ಕೆಳಗಿನ ಕಮಿಟಿಯವರಿಗೆ ರೂಬುರೂಬು ಕೊಟ್ಟು ರಶೀತಿ ಹೊಂದಿಕೊಳ್ಳಬಹುದಾಗಿಯೂ ಯಾ ಮಣಿಯಾರ್ಡರ್ ಮೂಲಕ ಸೆಕ್ರೆಟರಿಯವರಿಗೆ ಕಳುಹಿಸಬಹುದಾಗಿಯೂ ಕೇಳಿಕೊಳ್ಳುತ್ತಾಣಾಗಿದೆ. ಚಂದಾ ವಸೂಲು ಮಾಡುವ ಎಜಂಟರುಗಳವರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಗಳಿಗೆ ಬರೆದು ತಿಳಿದುಕೊಳ್ಳಬಹುದು.

ಹೆಚ್. ರುದ್ರಯ್ಯ,
(ಪ್ರೆಸಿಡೆಂಟ್.)

ಕ. ಮೆಂಬರುಗಳು.	ಕೆ. ಎಸ್. ಜಂಗಪ್ಪ,
ಶಿ. ಒಸಪ್ಪ.	(ಸೆಕ್ರೆಟರಿ.)
ಬಿ. ಕೃಷ್ಣಪ್ಪ.	ಡಿ. ಕ. ಪೊನ್ನಪ್ಪ,
ಬಿ. ಎ. ತಮ್ಮಯ್ಯ.	(ಜಾಯಿಂಟ್ ಸೆಕ್ರೆಟರಿ)

ಕೊಡಗು

ಮೂರ್ಚ ತಾ. ೨೭ ನೇ ಶುಕ್ರವಾರ ೧೯೩೬.

ಜೇನು ಮತ್ತು ಮೇಣದ ಮೂರಾಟ.

ಈಗ ಎಲ್ಲಿ ನೋಡಿದರೂ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಉಂಟಾಗಿರುವ ತೊಂದರೆ ಪರಂಪರೆಗಳನ್ನು ಕುರಿತು ಪ್ರಸ್ತಾಪಿಸುವುದೇ ಕೇಳಿಬರುತ್ತದೆ. ವರ್ಷಗಳು ದಾಟುತ್ತಾ ಬಂದ ಹಾಗೆ ಜನರ ಕಷ್ಟಗಳು ಹೆಚ್ಚುತ್ತಾ ಬರುತ್ತಿವೆ. ಕಷ್ಟ ನಷ್ಟಗಳು ಎಲ್ಲರಿಗೂ ವ್ಯಾಪಿಸಿರುವುದಾದರೂ ವಿಶೇಷವಾಗಿ ವ್ಯವಸಾಯಗಾರರ ಸ್ಥಿತಿಯು ವರ್ಣನಾತೀತವಾಗಿದೆ. ಸಾಲವಿಲ್ಲದ ರೈತರಿರುವದು ಬಹು ವಿರಳ. ಅದರಲ್ಲೂ ಇರುವ ಸಾಲವನ್ನು ತೀರಿಸುವೆವೆಂಬ ಆಶೆಇರುವವರು ಅದಕ್ಕಿಂತಲೂಕಡಿಮೆ ಎಂದರೆ ಅತಿಶಯೋಕ್ತಿಯಾಗಲಾರದು ವ್ಯವಸಾಯಗಾರರ ದೇಶವಾದ ಭಾರತ ಭೂಮಿಯಲ್ಲು, ಹಾಗೆಯೇ ನಮ್ಮ ಚಿಕ್ಕ ಕೊಡಗು ವ್ಯಾಂತ್ಯದಲ್ಲೂ ರೈತರ ಅಭಿವೃದ್ಧಿ ಎಂದರೆ ದೇಶದ ಅಭಿವೃದ್ಧಿ. ರೈತರ ನಾಶವೆಂದರೆ ದೇಶದ ನಾಶವೆಂಬುದನ್ನು ಇತ್ತೀಚೆಗೆ ಹಲವರು ಮನಗಂಡಿರುವರು. ಆದುದರಿಂದಲೇ ರಾಜಕೀಯ ಪಟುಗಳೂ, ಸಾಮಾಜಿಕ ಮತ್ತು ಆರ್ಥಿಕ ಸುಧಾರಕರೂ, ಅಧಿಕಾರ ಸ್ಥಾನದಲ್ಲಿರುವವರೂ ಈಗ ರೈತರು ವಾಸವಿರುವ ಗ್ರಾಮಗಳ ಕಡೆ ತಮ್ಮ ದೃಷ್ಟಿಯನ್ನು ತಿರುಗಿಸಿರುವದಾಗಿದೆ. ವ್ಯವಸಾಯಗಾರರ ಏಳಿಗೆಯ ಬಗ್ಗೆ ಎಲ್ಲರೂ ಆಲೋಚಿಸಹತ್ತಿರುವರು. ಆದರೆ ಇವರೆಲ್ಲರೂ ಗ್ರಾಮಸ್ಥರ ಹೀನಸ್ಥಿತಿಯ ಕಡೆಗೆ ತೋರಿಸುತ್ತಿರುವ ಸಹಾನುಭೂತಿಯು ಹೃತ್ಪೂರ್ವಕವಾದದ್ದೋ ಯಾ ನಪಮೂತ್ಯದ್ದೋ ಎಂಬುದು ಇನ್ನು ಅವರ ಕಾರ್ಯೂಚರಣೆಯಿಂದ ಗೊತ್ತಾಗಬೇಕಷ್ಟೆ.

ರೈತರ ಆರ್ಥಿಕ ದುಃಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಮುಖ್ಯವಾಗಿ ಎರಡು ಕಾರ್ಯಗಳನ್ನು ಸಾಧಿಸಬೇಕಾಗಿದೆ. ಅವರು ಕಾಲಕಾಲಾಂತರಗಳಿಂದ ಅಭ್ಯಾಸವೂಡಿರುವ ದುಂದುಗಾರಿಕೆಯ ಅಥವಾ ಅತ್ಯಾವಶ್ಯವಲ್ಲದ ಖರ್ಚನ್ನು ಖೋತೆ ಮಾಡಬೇಕು. ಇದರೊಂದಿಗೆ ಅವರ ಉತ್ಪತ್ತಿಯನ್ನು ಹೆಚ್ಚಿಸುವ ಏರ್ಪಾಡು ಮಾಡಬೇಕು. ಕೊಡಗಿನ ರೈತರ ಮುಖ್ಯ ವ್ಯವಸಾಯವು ಭತ್ತವಾಗಿದೆ; ಉತ್ತರ ಕೊಡಗಿನಲ್ಲಿ ಕೆಲವರು ರಾಗಿಯನ್ನೂ ಬೆಳೆಸುತ್ತಾರೆ. ಕಾಲಕ್ಕೆ ಸರಿಯಾಗಿ ಮಳೆ ಬಾರದ್ದರಿಂದ ಬೆಳೆ ಕಡಿಮೆಯಾಗಿಯೂ, ಡವಸ ಧಾನ್ಯಗಳ ಬೆಲೆಯು ಇಳಿದು ಹೋಗಿಯೂ ರೈತರ ಈ ಬಾಬಿನ ಮುಖ್ಯ ಉತ್ಪತ್ತಿಯು ಬಹುಮಟ್ಟಿಗೆ ಕಡಿಮೆಯಾಗಿದೆ. ಅದೂ ಅಲ್ಲದೆ ಈ ಬೆಳೆಯು ವ್ಯವಸಾಯಕ್ಕಾಗಿ ರೈತರು ಸುಮಾರು ಆರು ತಿಂಗಳ ಕಾಲ ಮೂಶ್ರ ದುಡಿಯಬೇಕಾಗಿರುವದು; ಉಳಿದ ಕಾಲವನ್ನು ಸಾಕಷ್ಟು ಪ್ರಯೋಜನಕ್ಕಾಗಿ ವಿನಿಯೋಗಿಸುತ್ತಿಲ್ಲ. ಆದ ಕಾರಣ ಅವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ಕರೆಫಸಲನ್ನು ಬೆಳೆಸಲು ಯಾ ಬೇರೆ ಉಪವೃತ್ತಿಗಳನ್ನು ಕೈಕೊಳ್ಳಲು ತಮ್ಮ 'ಅರ್ಧ ವರ್ಷ ವಿರಾಮ ಕಾಲವನ್ನು ಉಪಯೋಗಿಸುವದು ಅಗತ್ಯವಾಗಿದೆ. ಈ ಉದ್ದಿಶ್ಯದಿಂದಲೇ ಗ್ರಾಮ ಸಹಕಾರಿ ಸಂಘಗಳು ಉಪಕವಿಟಿಗಳನ್ನು ನೇಮಿಸಿ, ಗ್ರಾಮಸ್ಥರು ಹೆಚ್ಚಿನ ಶ್ರಮವಹಿಸಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಅವರಿಗೆ ಪ್ರೋತ್ಸಾಹವನ್ನೀಯುತ್ತಿರುವವು. ಇಂಥಾ ಉಪವೃತ್ತಿಗಳಲ್ಲಿ ಜೇನು ಸೊಣ ಸಾಕುವುದು ಒಂದು ಮುಖ್ಯವಾದುದೆಂಬುದರಲ್ಲಿ ಸಂಶಯವಿಲ್ಲ.

ಜೇನು ಮನುಷ್ಯನ ಆಹಾರ ಪದಾರ್ಥಗಳಲ್ಲಿ ಒಂದು ಉತೃಷ್ಟವಾದ ವಸ್ತುವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಅದರಲ್ಲಿ ಮನುಷ್ಯನ ಆರೋಗ್ಯಕ್ಕೆ ಬೇಕಾದ ಅಹಾರ ಗುಣಗಳು ಎಷ್ಟರ ಮಟ್ಟಿಗೆ ಇವೆಯೋ ಅಷ್ಟೇ ಔಷಧಿಯ ಗುಣಗಳೂ ಇವೆಯೆಂದು ಕಂಡುಹಿಡಿಯಲಾಗಿದೆ. ಹಲವು ತರಹದ ಕಾಯಿಲೆಗೆ ಅದು ಗುಣಕಾರಿಯೂದ ಔಷಧಿಯೆಂಬುದು ಈಗ ಅನುಭವಸಿದ್ಧ ಮಾತಾಗಿದೆ. ಅದರ ಉತ್ತಮ ಪ್ರಯೋಜನವನ್ನರಿತೇ ಅಮೇರಿಕ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಅದರ ಉತ್ಪತ್ತಿಗೆ ತುಂಬಾ ನಿಗವಿಟ್ಟು, ಈಗ ಅಲ್ಲಿ ಅದು ಎಷ್ಟೋ ಲಕ್ಷ ಜನರಿಗೆ ಜೀವನದ ದಾರಿಯೂಗಿ ಪರಿಣಮಿಸಿದೆ. ಇದೆನ್ನೆಲ್ಲಾ ಓದಿ ತಿಳಿಕೊಳ್ಳುತ್ತಾ, ಇದ್ದ ಪೊನ್ನಂಪೇಟೆ ಶ್ರೀ ಶಾಂದಾಶ್ರಮದ ಸ್ವಾಮಿ ಶಾಂಭವಾನಂದಂವರು ಜೇನು ಸೊಣ ಸಾಕುವ ವೃತ್ತಿಯನ್ನು ಕೊಡಗಿನಲ್ಲಿ ಸಾಧಿಸುವುದು ಉತ್ತಮವೆಂದು ಅಲೋಚಿಸಿದರು. ಅದಕ್ಕಾಗಿ ಅವರು ಕೆಲವು ವರ್ಷಗಳಿಂದ ಪರಿಶೋಧನಾ ಕಾರ್ಯಗಳನ್ನು ಮಾಡುತ್ತಾ ಒಂದು, ಗ್ರಾಮಾಂತರಗಳಲ್ಲಿ ಇದರ ಪ್ರಚಾರ ಕೆಲಸ ನಡಿಸಬೇಕೆಂದಿದ್ದರು. ಆದರೆ ತಾವು ಸಂಗ್ರಹಿಸುವ ಜೇನಿಗೆ ಸಾಕಷ್ಟು ಉತ್ತಮವಾದ ಬೆಲೆಯು ದೊರೆತ ಏನಹ ಜನರು ಆ ಕಾರ್ಯದಲ್ಲಿ ಕೈಹಾಕುವಂತೆ ಮಾಡುವುದು ಕಷ್ಟವೆಂದೂ, ಅದು ಜನರಿಗೆ ಹೆಚ್ಚು ಲಾಭದಾಯಕವಾಗಲಾರದೆಂದೂ ಕಂಡು ಬಂತು. ಆದುದರಿಂದ ಇಲ್ಲಿಯ ಜೇನಿಗೆ ಒಳ್ಳೇ ಮೂರಾಟ ದೊರೆಯುವ ಏರ್ಪಾಡು ಮಾಡಬೇಕಾದದ್ದು ಅತ್ಯವಶ್ಯವಾಯಿತು. ಈ ವಿಷಯ ಆಲೋಚನೆ ಮಾಡುತ್ತಿದ್ದಂಥ ಸ್ವಾಮಿ ಶಾಂಭವಾನಂದರವರು ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಮತ್ತು ಸಹಕಾರಿ ಸೆಂಟ್ರಲ್ ಬ್ಯಾಂಕಿನವರೊಂದಿಗೆ ಸೇರಿ ಚರ್ಚಿಸಿದರ ಫಲಿತಾಂಶವಾಗಿ ಇದಕ್ಕಾಗಿ ಒಂದು ಸಹಕಾರಿ ಸಂಘವು ಸ್ಥಾಪಿಸಲ್ಪಟ್ಟಿದೆ. ಇದರ ಆಫೀಸು ಈ ತಾರೀಕು 29ರಲ್ಲಿ ವಿರಾಜಪೇಟೆಯಲ್ಲಿ ತೆರೆಯಲ್ಪಡುವುದು. ಅದು 'ಕೊಡಗು ಜೇನು ಮತ್ತು ಮೇಣ ತಯಾರಿಸುವವರ ಮಿತ ಜವಾಬ್ದಾರಿಯ ಸಹಕಾರಿ ಸಂಘ ವೆಂದು ರಿಜಸ್ಟರು ಮಾಡಲ್ಪಟ್ಟಿದೆ.

ಬೆಟ್ಟ ಕಾಡುಗಳಿಂದ ಕೂಡಿದ ಕೊಡಗು ಪ್ರಾಂತ್ಯದ ಪ್ರಕೃತಿ ಸ್ಥಿತಿಯೇ ಜೇನುಸೊಣ ಸಾಕಲು ಬಹು ಅನುಕೂಲವಾದದ್ದಾಗಿದೆ ಈ ವೃತ್ತಿಯೊದರೊ ಕಷ್ಟಕರವಾದದ್ದೂ ಅಲ್ಲ. ರೈತರು ವಿರಾಮ ಕಾಲದಲ್ಲಿ ಹೆಚ್ಚಿನ ಪ್ರಯಾಸವಿಲ್ಲದೆ ಸುಲಭವಾಗಿ ಕೈಕೊಳ್ಳಬಹುದಾದ ವ್ಯವಸಾಯವಿದು. ಇದರಿಂದ ಅವರು ತಮ್ಮ ಉತ್ಪತ್ತಿಯನ್ನು ಸುಲಭವಾಗಿ ಹೆಚ್ಚಿಸಿಕೊಳ್ಳಬಹುದು.

ಕೊಡಗಿನ ಜೇನು ಅತ್ಯುತ್ಕೃಷ್ಟವಾದದೆಂದು ಕಂಡುಹಿಡಿಯಲಾಗಿದೆ ಆದುದರಿಂದ ಅದನ್ನು ಸೋಸಿ, ನಿರ್ಮಲ ಮಾಡಿ, ಕೆಡದೆಂತೆ ಕೆಲಕಾಲ ಇಡುವಂತೆ ಮಾಡಿದರೆ ಅದನ್ನು ಕೊಡಗಿನ ಹೊರಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಳ್ಳೇ ಕ್ರಯಕ್ಕೆ ಮೂರಾಟ ಮಾಡಲು ಅನುಕೂಲವಾಗುವುದು. ಅದನ್ನು ಒಂದು ನಿಶ್ಚಿತ ಡಿಗ್ರಿ ವರೆಗೆ ಕಾಯಿಸಿ, ತಂಣಗಾಗುವ ಮುಂಚಿತವಾಗಿಯೇ ಸೀಸೆಗೆ ಹಾಕಿ ಗಾಳಿಯಾಡದಂತೆ ಮುಚ್ಚಿದರೆ ಜೇನು ಹುಳಿಯಾಗದೆ ಕೆಲ ಕಾಲ ಕಾವಾಡಲ್ಪಡುವದೆಂದು ಗೊತ್ತಾಗಿದೆ. ಈ ಏರ್ಪಾಡುಗಳನ್ನೆಲ್ಲಾ ಮಾಡಲು ಯಂತ್ರಗಳ ಅವಶ್ಯಕತೆ ಇದೆ ಈಗ ಸ್ಥಾಪಿಸಲ್ಪಟ್ಟಿರುವ ಸಹಕಾರಿ ಸಂಘವು ಈ ಕೆಲಸಗಳನ್ನೆಲ್ಲಾ ನಡೆಸಲು ಯಂತ್ರಗಳನ್ನು ಕರಿಸುವುದಲ್ಲದೆ, ಹಾಗೆ ಜೇನು ತುಂಬಿದ ಸೀಸೆಗಳನ್ನು ಹೊರ ಪ್ರದೇಶಗಳಿಗೆ ಕಳುಹಿಸಿ ಉತ್ತಮ ಬೆಲೆಯಲ್ಲಿ ಮೂರಾಟ ಮಾಡುವ ಏರ್ಪಾಡನ್ನೂ ಕೈಕೊಳ್ಳುವುದು. ಈ ಏರ್ಪಾಡಿನಿಂದ ಕಮ್ಮಿ ಪಕ್ಷ ಜೇನಿಗೆ ಈಗ ಇಲ್ಲಿ ದೊರೆಯುವ ಬೆಲೆಯು ಇದರ ಷ್ಟು ಹೆಚ್ಚಾದರೂ ದೊರೆಯಬಹುದೆಂದು ಊಹಿಸಲಾಗಿದೆ. ಜೇನು ವಿಶ್ವಾಸಾರ್ಹವಾಗದಂತೆ ನೋಡಿಕೊಳ್ಳುವುದು ಅತ್ಯವಾಗಿದೆ. ಆದುದರಿಂದ ಜನರು ಜೇನನ್ನು ಅರಿಗಳಿಂದ ಹಿಂಡದೆ ಹಾಗೆಯೇ ಅರಿ ಸಮೇತ ಸಂಗ್ರಹಿಸಿಕೊಡುವುದು ಲಾಭದಾಯಕವಾಗಿದೆ. ಈ ಸಂಘವು ಈಗಕ್ಕೆ ಇಲ್ಲಿಯ ವಾಡಿಕೆಯ ಧಾರಣೆಯಲ್ಲಿ ಜನರಿಂದ ಜೇನನ್ನು ಕೊಂಡುಕೊಂಡು ಹೊರಗೆ ಮೂರಾಟ ಮಾಡಿದ ಮೇಲೆ ಬರುವ ಲಾಭದ ಒಂದು ಭಾಗವನ್ನು ಬೋನಸು ರೂಪದಲ್ಲಿ ಜೇನು ಸಂಗ್ರಹಿಸಿ ಕೊಟ್ಟವರಿಗೆ ಕೊಡುವ ಏರ್ಪಾಡೂ ಇದೆ. ಮುಖ್ಯವಾಗಿ ಈ ಸಂಘದಿಂದ ಜೇನು ಸಂಗ್ರಹಿಸುವ ಗ್ರಾಮಸ್ಥರಿಗೆ ಹೆಚ್ಚಿನ ಪ್ರಯೋಜನವಾಗಬೇಂಬುದೇ ಈ ಸಂಘ ಸ್ಥಾಪನೆಯ ಉದ್ದೇಶವಾಗಿದೆ. ಈಗ ಕೊಡಗಿನಲ್ಲಿ ಜೇನು ಮೇಣವು ಏನೊಂದೂ ಕ್ರಯ ಸಿಕ್ಕದೆ ಅಥವಾ ಒಳ್ಳೇ ಕ್ರಯ ದೊರೆಯದೆ ಬಹು ಮಟ್ಟಿಗೆ ಹಾಳಾಗುತ್ತಿದೆ. ಇದನ್ನು ತಡೆದು, ಮಿಶ್ರ ಮೂಡದ ಮೇಣಕ್ಕೂ ಕೂಡ ಉತ್ತಮವಾದ ಬೆಲೆ ದೊರಕಿಸುವುದೂ ಈ ಸಂಘದ ಕಾರ್ಯವಾಗಿದೆ. ಆದುದರಿಂದ ದೇಶದ ಮಹನೀಯರು ತಾವು ಸಂಗ್ರಹಿಸುವ ಜೇನು ಮತ್ತು ಮೇಣವನ್ನೆಲ್ಲಾ ಈ ಸಂಘಕ್ಕೇನೇ ಕಳುಹಿಸಿಕೊಟ್ಟು, ಅದಕ್ಕೆ ಪ್ರೋತ್ಸಾಹವನ್ನೀಯಬೇಕಾಗಿದೆ. ಈ ಸಂಘದ ಕೆಲಸ ಕಾರ್ಯಗಳು ಜಯಪ್ರದವಾಗಿ ನಡಿಯಬೇಕಾದರೆ ಪ್ರಥಮ ವರ್ಷ ಸುಮಾರು ಒಂಭತ್ತು ಸಾವಿರ ರೂಪಾಯಿ ಬೇಕಾಗುವದೆಂದು ಅಂದಾಜು ಮಾಡಲಾಗಿದೆ. ಆದುದರಿಂದ ಕೊಡಗಿನ ಎಲ್ಲಾ ಸಹಕಾರಿ ಸಂಘಗಳು ಇದರಲ್ಲಿ ಶೇರು ತೆಗೆದುಕೊಳ್ಳುವುದಲ್ಲದೆ ಖಾಸಗೀ ಮಹನೀಯರೂ ಪಾಲು ತೆಗೆದುಕೊಳ್ಳುವುದರ ಮೂಲಕ ಇದಕ್ಕೆ ಧನ ಸಹಾಯ ಮಾಡುವುದು ಅವಶ್ಯವಾಗಿದೆ. ಪಾಲು ಒಂದರ ಹತ್ತು ರೂಪಾಯಿ ಮೂತ್ರವಾದುದರಿಂದ ಹಲವರಿಗೆ ಇದರಲ್ಲಿ ಶೇರು ಮೆಂಬರುಗಳಾಗಿ ಸೇರಲು ಅನುಕೂಲವಿದೆ ಕೊಡಗಿನ ಜೇನು ಮತ್ತು ಮೇಣಕ್ಕೆ ಉತ್ತಮವಾದ ಬೆಲೆಯನ್ನು ಪಡೆಯುವಈ ಸಂಘದ ಉದ್ದೇಶವು ಕೈಗೂಡಿದರೆ ಜೇನು ಸೊಣ ಸಾಕುವ ಉಪವೃತ್ತಿಯು ದೇಶದ ಹಲವು ಭಾಗಗಳಿಗೆ ಹರಡಿ ಅದರಿಂದ ರೈತನ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಸುಲಭ ದಾರಿಯೂಗುವುದು. ಆದಕಾರಣ ಈ ಸಂಸ್ಥೆಗೆ ಪ್ರತಿಯೊಬ್ಬರೂ ಉತ್ತೇಜನ ಕೊಡುವರಾಗಿ ಆಶಿಸುತ್ತೇವೆ.

ಸುಭಾಷ್ಚಂದ್ರಬೋಸರ ಮೇಲೆ ನಿಬಂಧ.

ಸುಭಾಷ್ಚಂದ್ರಬೋಸರು ಒರುವ ಲಕ್ನೊ ಕಾಂಗ್ರೆಸು ಸಮಯಕ್ಕೆ ಹಿಂದೂಸ್ಥಾನಕ್ಕೆ ಬರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ ವರ್ತಮಾನದ ಮೇಲೆ ಬ್ರಿಟಿಷ್ ಸರಕಾರದ ಪರರಾಷ್ಟ್ರ ಮಂತ್ರಿಗಳು ವಿಯೂನದಲ್ಲಿರುವ ಬ್ರಿಟಿಷ್ ರಾಯಭಾರಿಗಳ ಮುಖಾಂತರ ಬೋಸರಿಗೆ, 'ಹಿಂದೂಸ್ಥಾನಕ್ಕೆ ಹಿಂತಿರುಗಿದಲ್ಲು ನೀವು ಒಂದಿತರಾಗುವಿರಿ' ಎಂದು ತಿಳಿಸಿರುವರು. ಈ ಬಗ್ಗೆ ತಾ. 23 ರಲ್ಲಿ ಎಸೆಂಬ್ಲಿಯಲ್ಲಿ ಶ್ರೀ ನೀಲಕಾಂತ ದಾಸ್‌ರವರು ಸರ್ಕಾರದ ವರ್ತನೆಯನ್ನು ಖಂಡಿಸುವ ಠರಾವನ್ನು ತಂದು ಅದು ಚರ್ಚಿಸಲ್ಪಟ್ಟು 62 ಜನರು ಪರವಾಗಿಯೂ 59 ಮಂದಿ ವಿರೋಧವಾಗಿಯೂ ಮತಕೊಟ್ಟ ಕಾರಣ ಪಾಸಾಯಿತು.

ಈ ವಿಷಯದಲ್ಲಿ ಠರಾವಿಗೆ ಒತ್ತಾಸೆಯೊಗಿ ಭಾಷಣವಿತ್ತ ಎಸೆಂಬ್ಲಿ ಸದಸ್ಯರು ಸರ್ಕಾರದವರ ವರ್ತನೆಯನ್ನು ಒಲವಾಗಿ ಖಂಡಿಸಿದರು. ಸರ್ಕಾರದವರು ಒಂದು ಕಡೆಯಿಂದ 'ಭಾರತೀಯರು ಇನ್ನು ಸ್ವರಾಜ್ಯವನ್ನು ಪಡೆಯಲು ಅರ್ಹರಾಗಿರುವದಿಲ್ಲ, ಅವರಿಗೆ ಕ್ರಮ ಕ್ರಮವಾಗಿ ಆ ಅರ್ಹತೆಯ ಸಂಪಾದನೆಯ ಶಿಕ್ಷಣವನ್ನು ಸಾವಧಾನವಾಗಿ ಕೊಡಲ್ಪಡುತ್ತಿರುವದೆ'ಂದು ಘೋಷಿಸುತ್ತಿರುವರು. ಅದೇ ಸಮಯದಲ್ಲಿ ಜನರಲ್ಲಿ ವಿನೇಕವನ್ನು ಹರಿ, ಜನರ ಅಜ್ಞಾನವನ್ನು ದೂರ ಸರಿಸಿ, ದೇಶದಲ್ಲಿ ಒಗ್ಗಟ್ಟನ್ನು ತಂದು, ದೇಶದ ಸೇವೆಮಾಡುವಂಥವರನ್ನು ಒಂದಿಸಿ ಅವರಿಂದ ಜನಸೇವೆಯು ಸಲ್ಲುವಂತೆ ಮಾಡುತ್ತಿರುವರು. ಕೆಲ ಸಮಯದಳಿಗೆ ಹಿಂದೆ ಬೋಸರನ್ನು ಇಂಗ್ಲೆಂಡಿಗೆ ಹೋಗಲು ಬಿಡದೆ ಅಡ್ಡಿ ಮಾಡಿದಾಗ ಅನೇಕ ಪ್ರಮುಖ ಆಂಗ್ಲೇಯರು ಬೋಸರಂಥ ವ್ಯಕ್ತಿಯ ಜನ್ಮಸಿದ್ಧ ಹಕ್ಕುಗಳ ಮೇಲೆ ಸರಕಾರದವರು ನಿಷ್ಕಾರಣವಾಗಿ ಹಾಕಿರುವ ನಿರ್ಬಂಧವನ್ನು ಖಂಡಿಸಿದರು. ಆದರೂ ಸರ್ಕಾರದವರು ಅದಕ್ಕೆ ಲಕ್ಷ್ಯ ಕೊಡದೆ ಈಗ ಸ್ವದೇಶಕ್ಕೆ ತೆರಳಲು ಉದ್ಯುಕ್ತರಾಗಿರುವ ಬೋಸರ ಮೇಲೆ ಪುನಹ ನಿರ್ಬಂಧವನ್ನು ಹಾಕಿರುವರು.

'ಬೋಸರು ಕ್ರಾಂತಿಕಾರರ ಪಕ್ಷದವರು' ಎಂಬದೊಂದೇ ಸರಕಾರದವರ ಹೇಳಿಕೆ. ಇರಲಿ, ಹಾಗೆ ಕ್ರಾಂತಿಕಾರಿಯೆಂದು ಇವರಿಗೆ ಸಪ್ರಮಾಣವಾಗಿ ತೋರಿ ಬಂದಲ್ಲು ನ್ಯಾಯ ಕೋರ್ಟುಗಳಲ್ಲಿ ಆ ಬಗ್ಗೆ ಅದರ ವಿಚಾರಣೆ ನಡೆಸಿ ಆ ಮೂಲಕ ತಕ್ಕ ಶಿಕ್ಷೆ ವಿಧಿಸಬಹುದಷ್ಟೆ. ಆದರೆ, ಆ ಪ್ರಕಾರ ಸರಕಾರದವರಿಗೆ ನ್ಯಾಯಸ್ಥಾನದಲ್ಲಿ ಸಪ್ರಮಾಣವಾಗಿ ಕಾರಣಗಳನ್ನು ಕೊಡಲು ಸಾಧ್ಯವಿಲ್ಲದ್ದರಿಂದಲೇ, ಅವರು ಹಿಂದೂ ಸ್ಥಾನಕ್ಕೆ ಬಂದಲ್ಲು ಕ್ರಾಂತಿಯನ್ನೆಬ್ಬಿಸುವರೆಂಬ ಊಹೆಯಿಂದ ಅವರನ್ನು ಈಗ ನಿರ್ಭಂದಿಸಿರುವರೆಂದು ಹೇಳಿದರೆ ತಪ್ಪಾಗದು. ಈಗಿನ ಸಂಕಾರಕ್ಕೆ ಖಾನೂನು ಮಾಡುವ ಅಧಿಕಾರಕ್ಕೆ ಏನೂ ಕೊರತೆಯಿಲ್ಲ. ಇದಕ್ಕೆ ಕಳೆದ ಎಸೆಂಬ್ಲಿಯಲ್ಲಿ ತಿರಸ್ಕೃತವಾದರೂ 'ಸಟಿ ಫೈ' ಮಾಡಲ್ಪಟ್ಟ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್' ಮಸೂದೆಯೇ ಉದಾಹರಣೆ. ಅದೂ ಸಾಲದೆ ತಪ್ಪು ಮಾಡದವನನ್ನು ಈ ಪ್ರಕಾರದ ತಪ್ಪು ಮಾಡುವನೆಂದು ಊಹಿಸಿ ಅವನ ಮೇಲೆ ಖಟ್ಲೆ ನಡೆಸುವ ಅಧಿಕಾರವನ್ನು ಚಲಾಯಿಸಿದರೆ ಮತ್ತೆ ಆ ದೇಶದ ಅವಸ್ಥೆಯೇನೆಂಬದು ಊಹನಾತೀತ. ಆದ್ದರಿಂದ ಸರಕಾರದವರು ಇನ್ನಾದರೂ ತಮ್ಮ ಧೋರಣೆಯನ್ನು ಬದಲಾಯಿಸಿ ನಾಗರೀಕ ರಾಜ್ಯಭಾರವೆಂಬ ತಮ್ಮ ಆಳಿಕೆಯನ್ನು ಸಮರ್ಥಿಸುವಂತೆಯೇ ನಾಗರೀಕ ಪ್ರಜೆಗಳ ಜನ್ಮಸಿದ್ಧ ಹಕ್ಕುಗಳನ್ನು ರಕ್ಷಿಸಬೇಕು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ಕಾಂಗ್ರೆಸು ಕಾರ್ಯಕಾರಿ ಮಂಡಲದ ಸಭೆಯು ಈ ತಾ 21 ನೇ ಶನಿವಾರ ಅಪರಾಹ್ನ ದೆಲ್ಲಿಯಲ್ಲಿ ಕೂಡಿತ್ತು. ಶ್ರೀ ಅಬ್ದುಲ್ ಗಫಾರ್‌ಖಾನರು ಜೈಲಿನಲ್ಲಿರುವದರಿಂದ ಅವರೂ ಮತ್ತು ಅಬ್ದುಲ್ ಕಲಂ ಅಜಾದರವರಲ್ಲದೆ ಮಿಕ್ಕವರೆಲ್ಲರೂ ಹಾಜರಿದ್ದರು.



(ಸಭೆಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು)

ಮಂತ್ರಿ ಪದವಿ ಸ್ವೀಕಾರದ ವಿಷಯದ ಚರ್ಚೆಯಲ್ಲಿ ತಕ್ಕ ಸಲಹೆಗಳನ್ನು ಪಡೆಯಲಿಕ್ಕಾಗಿ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಶ್ರೀ. ಭುಲಭಾಯಿ ದೇಸಾಯಿಯವರೂ ಮತ್ತು ಗೋವಿಂದ ವಲ್ಲಭ ಪಂತರೂ ನಿಮಂತ್ರಿತರಾಗಿದ್ದರು.

ಚರ್ಚೆಯ ಹೆಚ್ಚಿನಾಂಶವು ಬಹುತ ಲಕ್ನೊ ಕಾಂಗ್ರೆಸಿನ ಕಾರ್ಯಕಲಾಪಗಳ ವಿಷಯವಾಗಿತ್ತು. ಮಂತ್ರಿ ಪದವಿ ಸ್ವೀಕಾರದ ಚರ್ಚೆಯ ವಿಷಯದಲ್ಲಿ ಬಹುಮತದವರು ಲಕ್ನೊ ಕಾಂಗ್ರೆಸಿನಲ್ಲಿ ಈ ವಿಷಯ ಇತ್ಯರ್ಥವಾಗತಕ್ಕದೆಂದೂ, ಉಳಿದವರು ಹೊಸ ರಾಜ್ಯ ಘಟನೆಯು ಕಾರ್ಯರೂಪದಲ್ಲಿ ಬರಲು ಇನ್ನೂ ಒಂದು ವರ್ಷದ ಮೇಲೆ ಸಮಯ ಬೇಕಾಗುವದರಿಂದ ಈ ವಿಷಯವು ಈಗಲೇ ಇತ್ಯರ್ಥವಾಗಬೇಕಾಗಿಲ್ಲವೆಂದೂ ಅ

ಭಿವ್ಯಾಯಪಟ್ಟಿರುವರೆಂದು ತಿಳಿಯಲಾಗಿದೆ. ಒಟ್ಟಿನಲ್ಲಿ ನ್ಯಾಯವಿಧಾಯಕ ಸಭೆಗಳಿಗೆ ಕಾಂಗ್ರೆಸಿನವರು ಆರಿಸಿ ಬರುವದಕ್ಕಾಗಿ ಕಾಂಗ್ರೆಸು ಸ್ಪರ್ಧಿಸಬೇಕೆಂದೂ, ಮಂತ್ರಿಪದವಿ ಸ್ವೀಕಾರದ ಪ್ರಶ್ನೆಯು ತತ್ಕಾಲ ತಿರಸ್ಕರಿಸಲ್ಪಡಬೇಕೆಂದೂ ಎನ್ನುವ ತೀರ್ಮಾನವು ಒಪ್ಪಲಾಗಿ ಬರುವ ಲಕ್ಷ್ಮೊ ಕಾಂಗ್ರೆಸಿನಲ್ಲಿ ಇದಕ್ಕೆ ಒಪ್ಪಿಗೆ ಪಡೆಯಲು ಇಡಲ್ಪಡುವಂತೆ ತೀರ್ಮಾನವಾಗಿದೆಂದು ತಿಳಿಯಬಂದಿರುತ್ತೆ.

ಬಂಗಾಳ ಪ್ರಾಂತೀಕ ಕಾಂಗ್ರೆಸು ಜುನಾವಣಾ ಒಳ ಜಗಳದ ಬಗ್ಗೆ ಎರಡು ಪಕ್ಷದವರ ವಾದವನ್ನು ಕೇಳಿ ಆ ವಿಷಯದ ತೀರ್ಮಾನಕ್ಕಾಗಿ ಒಂದು ಹೊಸ ಜುನಾವಣೆಯನ್ನು ನಡೆಸುವಂತೆ ತೀರ್ಮಾನಿಸಲಾಯಿತು.

ಬರ್ಮಾದ ವಿಂಗಡಿಸುವಿಕೆಯ ವಿಷಯ ಮೂರು ಕತೆಗಳು ಬಾಕಿತ್ತಾದರೂ ಆ ಒಗ್ಗೆ ಸಲಹೆಗಳು ಬರ್ಮಾದವರಿಂದಲೇ ಬರುವ ವರೆಗೆ ಯಾವ ತೀರ್ಮಾನವನ್ನೂ ನಿಶ್ಚಯಿಸಲಾಗುವದಿಲ್ಲವೆಂದು ನಿಶ್ಚಯಿಸಲಾಯಿತು.

ಕಾಂಗ್ರೆಸು ಘಟನೆಯಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ಮಾಡಲು ನಿಯೋಜಿತವಾಗಿರುವ ಉಸ—ಸಮಿತಿಯವರು ತಮ್ಮ ಕಾರ್ಯವನ್ನು ಪೂರ್ತಿಗೊಳಿಸದಿರುವದರಿಂದ ಆ ವಿಷಯದ ಚರ್ಚೆಗಳಿಗೂ ಅವಕಾಶವಾಗಲಿಲ್ಲ.

ಕಾಂಗ್ರೆಸು ನೇಶನಲಿಸ್ಟ್ ಪಾರ್ಟಿ ಯವರೂ ಕಾಂಗ್ರೆಸಿನವರೂ ಒಟ್ಟಾಗಿ ಕೆಲಸಮಾಡುವಾರು ತೀರ್ಮಾನದ ವಿಷಯದಲ್ಲಿ ಮತಕೊಡಲು ಅಧಿಕಾರ ದೊರೆಯಲು ಅವಕಾಶ ಕೊಡಲಿರುವಂಥ ಲಕ್ಷ್ಮೊ ಕಾಂಗ್ರೆಸಿನಲ್ಲಿಡಲ್ಪಡುವ ತಿದ್ದುಪಡಿಗಳನ್ನು ಕುರಿತು ಅನ್ಯೋನ್ಯ ವಿಚಾರಗಳು ನಡೆದಿತು.

ವರ್ತಮಾನ ಸಂಗ್ರಹ.

ಒಳದೇಶ.

ಸ್ಕೂಲ್ ಫೈನಲ್ ಪರೀಕ್ಷೆಯು ಈ ತಾರೀಕು 23 ರಲ್ಲಿ ಪ್ರಾರಂಭವಾಗಿ, ತಾ. 27ರಲ್ಲಿ ಮುಗಿಯಿತು.

ಈ ವೊದಲು ಕವಿಷನರಾಗಿದ್ದ ಮೆ. ಬಾಸ್‌ಮನ್ ಐ ಸಿ. ಯಸ್. ರವರು ಈ ತಾರೀಕು 25 ರಲ್ಲಿ ಮಡಿಕೇರಿಯಿಂದ ಡೆಲ್ಲಿಗೆ ಹೊಂಟು ಹೋದರು.

ಈ ವಾರ ಮಡಿಕೇರಿಯಲ್ಲಿ ಕಾಫಿ ಖಾಡಿಗೆ ರೂ. 117 ಮತ್ತು ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ 40 ಕ್ರಯವಿತ್ತೆಂದು ತಿಳಿಯುತ್ತೇವೆ.

ಸಿದ್ದಾಪುರ ಇಲ್ಕ್ ಹಿಲ್ ಎಸ್ಟೇಟಿನ ಆಸ್ಪತ್ರೆಯಲ್ಲಿರುವ ಮೆ ಕೂಕ್ಕರೆಲ್ರ ಮೂಚಿಯ್ಯನವರ ಪತ್ನಿಯವರು ಈ ತಾ 18 ರಲ್ಲು ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಅಮ್ಮತ್ತಿನಾಡು ಕಾವಾಡಿ ಗ್ರಾಮದ ಭಗವತೀ ದೇವರ ಉತ್ಸವವು ಬರುವ ಏಪ್ರಿಲ್ ತಾ. 10 ಮತ್ತು 11 ರಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಮೆ ಐ. ಯಂ ಫ್ರೇಜರ್ ಐ. ಸಿ ಯಸ್. ರವರು ಈ ತಾರೀಕು 22 ರಲ್ಲಿ ಮಡಿಕೇರಿಗೆ ಬಾದು ತಾರೀಕು 24 ರಲ್ಲಿ ಕವಿಷನರ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುವರು.

ಫೆಡರೇಟೆಡ್ ಮಲೆಯಾ ಸ್ಟೇಟ್ಸಿನ ಮೋಂಟ್ಯಾನಾದಲ್ಲಿ ಇರುವ ಡಾಕ್ಟರ್ ಬಿದ್ದಂಡ ಭೀಮಯ್ಯನವರ ಪತ್ನಿಯವರು ಕಳೆದ ವಾರ ಪ್ರಸವಿಸಿ ಶಿವಾಧೀನರಾದರೆಂದು ತಿಳಿಯಬರುತ್ತದೆ.

ಬರುವ ಏಪ್ರಿಲ್ ತಾರೀಕು 17ರಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಮುಂದುಗಡೆಯಲ್ಲಿ ಕೆಲವು ಕೇಪು ಕೋವಿಗಳು ಮತ್ತು ತೋಟ ಕೋವಿಗಳು ಹರಾಜು ಮಾಡಲ್ಪಡುವದೆಂದು ತಿಳಿಯಬರುತ್ತದೆ.

ಕೊಡಗು ಎತ್ಲೆಟಿಕ್ ಎಸೋಸ್ಸಿಯೇಶನಿನ ಟೆನ್ನಿಸ್ ಟೂರ್ನಮೆಂಟು ಬರುವ ಏಪ್ರಿಲ್ ತಾರೀಕು 2 ರಿಂದ 11 ರ ವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಟೆನ್ನಿಸ್ ಕೋರ್ಟಿನಲ್ಲಿ ನಡೆಯುವುದು.

ಮಡಿಕೇರಿ ಪೋಸ್ಟಲ್ ಸಿಬ್ಬಂದಿಯವರು ಈ ತಾರೀಕು 22 ರಲ್ಲಿ ಅವರ ಸುಪರಿಂಟಿಂಡೆಂಟರಾದ ಮೆ. ಗಾರ್ಡನ್‌ರವರ ಅಧ್ಯಕ್ಷತೆಯಲ್ಲಿ ಒಂದು ಕ್ಲಬ್ಬನ್ನು ತೆರೆದಿರುವರೆಂದು ತಿಳಿಯುತ್ತೇವೆ.

ಬರುವ ಏಪ್ರಿಲ್ ತಾರೀಕು 5 ರಲ್ಲಿ ಮೂರ್ನಾಡಿನ ಕೋಲು ಮಂದಿನ್ನ ಅಸಿಸ್ಟೆಂಟ್ ಕಮಿಷನರಾದ ಮೆ. ಯಂ. ಎಸ್. ಮಂದಣ್ಣನವರ ಅಧ್ಯಕ್ಷತೆಯಲ್ಲಿ ದನಗಳ, ವ್ಯವಸಾಯಿಕ ಮತ್ತು ಕೈಗಾರಿಕೆ ಸಾಮಾನುಗಳ ಪ್ರದರ್ಶನವು ನಡೆಯುವುದು.

ಮಡಿಕೇರಿ ಮಹಮ್ಮದೀಯರ ಯುವಕ ಸಂಘದ ಆಶ್ರಯದಲ್ಲಿ ನಡೆದ ಬ್ಯಾಡ್‌ಮಿಂಟನ್ ಟೂರ್ನಮೆಂಟಿನ ತಾರೀಕು 21ರ ಆಖೈರು ಆಟಗಳಲ್ಲಿ ಮಂದಾಪುರ ಟೀಮಿನವರು 'ಡಬ್ಬಲ್ಸ್ ಮತ್ತು ಫೈವ್ಸ್' ನಲ್ಲಿಯೂ ಜಯಶೀಲರಾದರು ಆ ದೇ ದಿನ ಕವಿಷನರವರು ಗೆದ್ದವರಿಗೆ ಇನಾಮುಗಳನ್ನ ಕೊಟ್ಟರು.

ವೀರಾಜಪೇಟೆ ಒಳಿ ಇರುವ ಕುರಿ ವೊಟ್ಟಿಯಲ್ಲಿ ಈ ತಾರೀಕು 19 ರಲ್ಲಿ ಒಬ್ಬ ವಲೆಯೊಳದವನ ಶವವು ಸೊಣಹಾಕಿದಂತೆ ಒಂದು ಮರಕ್ಕೆ ತಾಗಿಕೊಂಡಿತ್ತೆಂತಲೂ, ವರೀಕ್ಷಿಸಿದಲ್ಲಿ ಅದು ಬೇರೆಯವರಿಂದ ಕೊಲ್ಲಲ್ಪಟ್ಟು ತಂಗಹಾಕಲ್ಪಟ್ಟಿರಬಹುದೆಂಬ ಸಂಶಯ ಉಂಟಾಗಿದೆಯೆಂದೂ, ಪೊಲೀಸಿನವರು ತನಿಕೆ ನಡಿಸುತ್ತಿರುವರೆಂದೂ ತಿಳಿಯಬರುತ್ತದೆ.

ಕಳೆದ ವಾರ ಪೊನ್ನಂಪೇಟೆನಾಡು ನಿಟ್ಟೂರು ಗ್ರಾಮದ ಮೆ. ಮಲಚಿರ ಬೆಳ್ಯಪ್ಪನವರ ಮನೆಗೆ ರಾತ್ರಿಯಲ್ಲಿ ಒಬ್ಬ ವಾಪಿಳ್ಳೆಯು ಕದಿಯಲಿಕ್ಕೆ ಹೋದನೆಂದೂ. ಆಗ ಅವನಿಗೆ ಮೆ. ಬೆಳ್ಯಪ್ಪನವರು ಗುಂಡು ಹೊಡೆದದ್ದು ಅವನ ತೊಡೆಗೆ ಚಿಲ್ಲು ತಗಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ, ಕೇಸು ಪೊಲೀಸಿನವರ ವಿಚಾರಣೆಯಲ್ಲಿದೆಯೆಂದೂ ವರ್ತಮಾನ.

ಮೆ ಪುಚ್ಚಿಮಾಡ ನಾಣಯ್ಯನವರ ರಾಜಿನಾಮೆಯಿಂದ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಖಾಲಿಬಿದ್ದಿರುವ ಪೊನ್ನಂಪೇಟೆ-ಶ್ರೀಮಂಗಲ ನಾಡುಗಳ ಜನ್ಮ ಪ್ರತಿನಿಧಿಯ ಸ್ಥಳಕ್ಕೆ ಬರುವ ಮೇ ತಿಂಗಳಕ್ಕೆ 15ರಲ್ಲಿ ಜುನಾವಣೆ ನಡೆಸಲ್ಪಡುವದೆಂದೂ, ಅದಕ್ಕಾಗಿ ಬರುವ ಏಪ್ರಿಲ್ 1 ರೊಳಗೆ ಉಮೇದುವಾರರ ನೇಮಕವಾಗಬೇಕೆಂದೂ, ಏಪ್ರಿಲ್ 2 ರಲ್ಲಿ ನೆ ವಾಕ ಪತ್ರಗಳ ಪರಿಶೋಧನೆಯೂಗ ವದೆಂದೂ, ಏಪ್ರಿಲ್ 4 ರಲ್ಲಿ ಉಮೇದುವಾರರುಗಳ ಆಖೈರು ಪಟ್ಟಿ ಪ್ರಕಟಿಸಲ್ಪಡುವದೆಂದೂ ಗಜೆಟಿನಲ್ಲಿ ಬಹಿರಂಗಪಡಿಸಲ್ಪಟ್ಟಿದೆ.

ಹಿಂದೂದೇಶ.

ಕಳೆಪ ತಾ 14ನೇ ಶನಿವಾರಕ್ಕೆ ಮುಗಿದ ವಾರದಲ್ಲಿ ಬೊಂಬಾಯಿ ಬಂದರಿನಿಂದ 68,80,294 ರೂಪಾಯಿನ ಚಿನ್ನವು ಯೂರೋಪಿಗೆ ರವಾನೆಯಾಗಿದೆ

ತೆಂಗೂನಿನ ಹೊಜಾಡದಲ್ಲಿ ಬೆಂಕಿ ಎದ್ದು ಜವಳಿ ಪೇಟೆಯ ಸಹಲವು ಅಂಗಡಿಗಳು ಸುಟ್ಟು ಉರಿದು ಸುಮಾರು 10 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ.

ಡೆಪಿನಿಟ್ಟಿಗಳಿಗೆ ಕೃಷಿ ಕೈಗಾರಿಕೆಗಳ ಶಿಕ್ಷಣವನ್ನು ಹೆಚ್ಚಿಸಲು ಬಂಗಾಳ ಸರಕಾರವು ನಿರ್ಧರಿಸಿದೆ. 45 ಮಂದಿ ಡೆಪಿನಿಟ್ಟಿಗಳಿಗೆ ಕೃಷಿ ಶಿಕ್ಷಣವು ದೊರಕುವಂತೆ ಏರ್ಪಾಡು ನಡೆದಿದೆ.

ಹಿಂದೂ ಯುವಕರು ಇದೇ ಏಪ್ರಿಲ್ ತಾ. 1 ರಿಂದ ಡಾರ್ಜಿಲಿಂಗ್ ಜಿಲ್ಲೆಯೊಳಗೆ ಕಾಲಿಡಕೂಡದಾಗಿ ಒಂಗಾಳ ಸರಕಾರವು ಬಹಿಷ್ಕಾರಾಜ್ಞೆಯನ್ನು ಪ್ರಕಟಿಸಿದೆ.

ಖುಲ್ನಾ ಜಿಲ್ಲೆಯಲ್ಲಿ ಬೆಳೆ ಕೆಟ್ಟಿರುವುದರಿಂದ ಸರಕಾರವು ವಿಪನ್ನರಿಗೆ 20 ಸಾವಿರ ರೂಪಾಯಿಗಳ ಸಾಲ ಕೊಡುವಂತೆ ನಿರ್ಧರಿಸಿದೆ. ಅಲ್ಲಿನ ಡಿ ಬೋರ್ಡ್, 25 ಸಾವಿರ ರೂಪಾಯಿ ಖರ್ಚಾಗುವ 'ರಿಲೀಫ್' ಕಾಮಗಾರಿಗಳನ್ನು ಕೈಕೊಳ್ಳಬೇಕೆಂದೂ ತೀರ್ಮಾನಿಸಿದೆ.

ವಿಶಾಖಪಟ್ಟಣದಲ್ಲಿರುವ ವಿಕ್ಟೋರಿಯಾ ಫೌಂಷನ್ ಆಸ್ಪತ್ರೆಗೆ ಇಲೆಕ್ಟ್ರಿಕ್ ದೀಪಗಳನ್ನೂ, ಬೀಸಣಿಗೆಗಳನ್ನು ಇಡುವುದಕ್ಕಾಗಿ ಜಮುಪುರ ಸಂಸ್ಥಾನದ ಮಹಾರಾಜರವರು 10,000 ರೂಪಾಯಿಯನ್ನು ಉದಾರವಾಗಿ ದಯಪಾಲಿಸಿರುವ ತಕ್ಕರಿಯು ಪ್ರಕಟವಾಗಿದೆ.

ಕೆಲವು ವರ್ಷಗಳಿಂದ ಬಿಡದೆ ಏಕ ಪ್ರಕಾರ ಬೆಳೆ ಕೆಟ್ಟು ಹೋದುದುಂದ, ಅಹಮ್ಮದಾಬಾದು ಜಿಲ್ಲೆಯ ಅಸ್ಲಾಲಿ ಗ್ರಾಮದ ತೀರ್ವೆ ವಸೂಲಿ ತಮ್ಮಿಂದ ಸಾಧ್ಯವಿಲ್ಲವೆಂದು ಅಲ್ಲಿನ ರೆವಿನ್ಯೂ ಇನಸ್ಪೆಕ್ಟರರೂ, ಪಟೇಲರೂ ತಮ್ಮ ಉದ್ಯೋಗಸ್ಥಾನಗಳಿಗೆ ರಾಜಿನಾಮೆ ಅರ್ಜಿ ಒಪ್ಪಿಸಿ ಹೊರಕಿದ್ದಾರೆ

ಶ್ರೀ. ಗಳಾದ ಶರತ್‌ಚಂದ್ರ ಬೋಸ್, ಜೆ ಸಿ ಗುಪ್ತ, ಡಾ ಸುರೇಶಚಂದ್ರ ಬ್ಯಾನರ್ಜಿ ಮೊದಲಾದ ಒಂಗಾಳದ ಪ್ರಮುಖ ಕಾಂಗ್ರೆಸು ಮುಖಂಡರು ಸೇರಿ, ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡುವುದರಿಂದ ಕಾಂಗ್ರೆಸಿಗೆ ತೊಂದರೆ ಎಂದೂ, ಸ್ವಾತಂತ್ರ್ಯ ಸಾಧನೆಗೆ ಅಡಚಣೆ ಎಂದೂ ಪ್ರಕಟಿಸಿರುವರು.

ಪೂರ್ವ ಒಂಗಾಳ ಮತ್ತು ಅಸ್ಸಾಮಿಗೆ ಸೇರಿದ ಡಿಬ್ರೂಘರ್ ಎಂಬ ಊರಿನಲ್ಲಿ ಒಬ್ಬ ಸಾಧುವು ದೇವಸ್ಥಾನವನ್ನು ಕಟ್ಟಿಕೊಂಡಿದ್ದು ಅದನ್ನು ದನೋಡೆಕೋರರಿಗೂ ಕಳ್ಳ ಕಾಕರಿಗೂ ಆಶ್ರಯ ಕೊಟ್ಟುಕೊಂಡಿದ್ದನೆಂದು ಸ್ಥಳೀಯ ಸರ್ಕಾರದವರು ಆ ದೇವಾಲಯವನ್ನು ಕೆಡವಿಸಿ ವಿಗ್ರಹವನ್ನು ಬೇರೊಂದು ದೇವಾಲಯಕ್ಕೆ ತಾಗಿಸಿ ಆ ಸಾಧುವನ್ನು ದಸ್ತಗಿರಿ ಮಾಡಿರುವುದಾಗಿ ಪ್ರಕಟವಾಗಿದೆ.

ಕಿಲ್ಲೂರಿನಲ್ಲಿ ಮಳೆ ಸರಿಯಾಗಿ ಕಾಲಕಾಲಕ್ಕೆ ಸುರಿಯುಲಿಲ್ಲವಾದುದರಿಂದ ನೋಯಲ್ ನದಿಯು ಬತ್ತಿಹೋಗಿ ಊರಿನ ಬಾವಿಗಳೆಲ್ಲಾ ಒಣಗಿ ಹೋಗಿವೆ. ಆ ಊರಿನಲ್ಲಿ ಪ್ರಜೆಗಳು ಒಂದು ಕೊಡ ನೀರಿಗೆ ಮೂರು ಕಾಸಿನಿಂದ ಒಂದಣೆ ವರೆಗೂ ಖರೀದಿ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ ದನಗಳಿಗೆ ನೀರಾಶ್ರಯವಿಲ್ಲವಾದುದರಿಂದ ರೈತರು ತಮ್ಮ ರಾಸುಗಳನ್ನು ಸುಲಭ ಬೆಲೆಗೆ ಮಾರಿಬಿಡುತ್ತಿದ್ದಾರೆಂದು ವರ್ತಮಾನ.

ವೈಸೂರಿನಲ್ಲಿ ಮೆ. ಅ. ರಂಗಯ್ಯ ಬಿ. ಎ. ಇವರು 'ಸಾಧ್ವಿ' ಎಂಬ ಹೆಸರಿಟ್ಟ ವಾರ ಪತ್ರಿಕೆಯನ್ನು ಪ್ರಾರಂಭಿಸಿ ನಡೆಸುತ್ತಿದ್ದಾರೆ. ಕೀರ್ತಿಶೇಷರಾದ ಮೆ. ಯಂ. ಯಸ್. ವೆಂಕಟಕೃಷ್ಣಯ್ಯನವರ ಮೊಮ್ಮಗ ಮೆ. ಯಂ. ಎಸ್ ರಾಮಕೃಷ್ಣಯ್ಯನವರು ಆ ಹೆಸರಿನ ಪತ್ರಿಕೆಯನ್ನು ಮೆ. ರಂಗಯ್ಯನವರು ನಡೆಸಿದಂತೆ ತಡೆಯಬೇಕೆಂದೂ ಆ ಹೆಸರಿನ ಹಕ್ಕು ತಮ್ಮ ಆಸ್ತಿಕ್ಕೆ ಸೇರಿದ್ದೆಂದೂ ಮೆ. ರಂಗಯ್ಯನವರ ಮೇಲೆ ಮುನ್ಸೀಫ್ ಕೋರ್ಟಿನಲ್ಲಿ ದಾವಾ ಮಾಡಿರುವುದಾಗಿ ಪ್ರಕಟವಾಗಿದೆ.

ಕಳೆದ ವಾರ ಸಾರ್ವಭೌಮ ನ್ಯಾಯವಿಧಾಯಕ ಸಭೆಯಲ್ಲಿ ಮಿ ಎಚ್. ಪಿ. ಮೋಡಿಯವರು ಮಾತನಾಡುತ್ತಾ ಇಂಡಿಯಾ ದೇಶದ ಆರ್ಥಿಕ ಸ್ಥಿತಿಯನ್ನು ಇತರ ದೇಶಗಳೊಡನೆ ಸಮಾಹೋಲಿಸಿದರು. ಅವರು ತಿಳಿಸಿದುದ್ದೇನೆಂದರೆ—ಇಂಡಿಯಾ ದೇಶದಲ್ಲಿ ಕೈಗಾರಿಕೆಯಿಂದ ಆದಾಯ ಬರುವುದು ತಲಾ 20 ರೂ. (ಜಪಾನ್‌ನಲ್ಲಿ 158 ರೂ., ಬ್ರಿಟನಿನಲ್ಲಿ 410 ರೂ., ಕಾನಡಾ 470 ರೂ. ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ 720 ರೂ.) ಹಿಂದೂಸ್ಥಾನದಲ್ಲಿ ಸಾಮಾನ್ಯವಾಗಿ ಒಬ್ಬ ಪ್ರಜೆಯ ಆದಾಯ ರೂ. 100, (ಕಾನಡಾ 1,300, ಬ್ರಿಟನ್ 1,100, ಸಂಯುಕ್ತ ಸಂಸ್ಥಾನ 2,000, ಜಪಾನ್ 270 ರೂಪಾಯಿಗಳು.) ಹಿಂದೂಸ್ಥಾನದಲ್ಲಿ ಬ್ಯಾಂಕಿನ ಡಿಪಾಜಿಟ್ಟುಗಳು ತಲಾ 7 ರೂಪಾಯಿ (ಬ್ರಿಟನ್ 700, ಜಪಾನ್ 250 ರೂಪಾಯಿ.) ಇಂಡಿಯಾ ದೇಶದಲ್ಲಿ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳು ತಲಾ 2 ರೂಪಾಯಿ (ಬ್ರಿಟನ್ 270, ಜಪಾನ್ 90, ಫ್ರಾನ್ಸ್ 125 ರೂಪಾಯಿ.)

ಯುದ್ಧ ವಾರ್ತೆ.

ಮೂ ಚಿ ೯ ತಾ. 19.

ಅಬಿಸೀನಿಯಾ ಚಕ್ರವರ್ತಿಯವರು.

ಅಂಬ ಅಲಜಿಯಲ್ಲಿ ಭಯಂಕರ ಕದನ.

ಇಟೆಲಿಯ ಸೈನಿಕರಿಗೂ, ಅಬಿಸೀನಿಯರಿಗೂ ಅಂಬ ಅಲಜಿಯಲ್ಲಿ ಭೀಕರ ಕದನವು ನಡೆಯುತ್ತಲಿದೆ ಇಟೆಲಿಯವರು ಅಶಕ್ತರಾಗಿ ಸರೋವರದ ಮಾರ್ಗವಾಗಿ ಮುಂದೊತ್ತುತ್ತಲಿದ್ದರೂ ಅಬಿಸೀನಿಯರ ಪ್ರತಿಭಟನೆಯಿಂದ ಹಿಂತಿರುಗಬೇಕಾಯಿತು. ಅಬಿಸೀನಿಯರು ತಮ್ಮ ಸ್ಥಳದಿಂದ ಕದಲಿರುವದಿಲ್ಲವಾದರೂ ಎಂಡು ಪಕ್ಷದವರಿಗೂ ಭಾರೀ ನಷ್ಟವಾಗುತ್ತಲಿದೆ. ಚಕ್ರವರ್ತಿಗಳೇ ಸ್ವತಃ ಈ ಯುದ್ಧದ ಚತುರೋಪಾಯಗಳನ್ನು ನಡೆಸುತ್ತಲಿರುವದಾಗಿ ತಿಳಿಯಬಂದಿದೆ.

ರಾಜಿ ಪ್ರಯತ್ನ ಒಂದು ಕಡೆ.

